ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಇಲಾಖೆ

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ**

ಸಮಗ್ರ ಶಿಕ್ಷಣ ಅಭಿಯಾನ


# ಕಲಿಕಾ ನ್ಯೂನತೆ

## *Learning Disabilities*

2019–20ನೇ ಸಾಲಿನ ಶಿಕ್ಷಕರ ಶಿಕ್ಷಣ ಯೋಜನೆ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಶಿವಮೊಗ್ಗ

**2020**



Scanned with CamScanner

## ಪರಿವಿಡಿ



| ಕ್ರಮ ಸಂಖ್ಯೆ | ಪರಿವಿಡಿ | ಪುಟ ಸಂಖ್ಯೆ |
|---|---|---|
| 1 | ಮುನ್ನುಡಿ | 1 |
| 2 | ನಿರ್ದೇಶಕರ ಮಾತು | 2 |
| 3 | ಪೀಠಿಕೆ | 4 |
| 4 | ಕಲಿಕಾ ನ್ಯೂನತೆ ವಿಧಗಳು | 7 |
| 5 | ಕಲಿಕಾ ನ್ಯೂನತೆ ಇರುವ ಮಕ್ಕಳನ್ನು ಗುರುತಿಸುವ ವಿಧಾನ | 8 |
| 6 | ಕಲಿಕಾ ನ್ಯೂನತೆಯ ಮಕ್ಕಳ ಸಂಭಾವ್ಯ ಕಾರಣಗಳು | 10 |
| 7 | ಕಲಿಕಾ ನ್ಯೂನತೆಯ ಇತರೆ ಕಾರಣಗಳು | 11 |
| 8 | ಕಲಿಕಾ ನ್ಯೂನತೆಯ ಮಕ್ಕಳ ಪರಿಹಾರಗಳು | 13 |
| 9 | ಡಿಸ್‌ಲೆಕ್ಸಿಯ | 14 |
| 10 | ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಕಾರಣಗಳು | 15 |
| 11 | ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಲಕ್ಷಣಗಳು | 16 |
| 12 | ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಪರಿಹಾರಗಳು | 17 |
| 13 | ಡಿಸ್ ಗ್ರಾಫಿಯ | 19 |
| 14 | ಡಿಸ್ ಗ್ರಾಫಿಯ ಕಲಿಕಾ ನ್ಯೂನತೆಯ ಕಾರಣಗಳು. | 21 |
| 15 | ಡಿಸ್ ಗ್ರಾಫಿಯ ಕಲಿಕಾ ನ್ಯೂನತೆಯ ಲಕ್ಷಣಗಳು. | 21 |
| 16 | ಡಿಸ್ ಗ್ರಾಫಿಯ ಕಲಿಕಾ ನ್ಯೂನತೆಯ ಪರಿಹಾರಗಳು. | 22 |
| 17 | ಡಿಸ್‌ಕ್ಯಾಲ್ಕ್ಯೂಲಿಯ | 23 |
| 18 | ಡಿಸ್‌ಕ್ಯಾಲ್ಕ್ಯೂಲಿಯ ಕಲಿಕಾ ನ್ಯೂನತೆಯ ಕಾರಣಗಳು | 24 |
| 19 | ಡಿಸ್‌ಕ್ಯಾಲ್ಕ್ಯೂಲಿಯ ಕಲಿಕಾ ನ್ಯೂನತೆಯ ಲಕ್ಷಣಗಳು | 25 |
| 20 | ಡಿಸ್‌ಕ್ಯಾಲ್ಕ್ಯೂಲಿಯ ಕಲಿಕಾ ನ್ಯೂನತೆಯ ಪರಿಹಾರಗಳು | 26 |
| 21 | ಅವಧಾನದ ಕೊರತೆ & ಅತೀ ಚಟುವಟಿಕೆ | 28 |
| 22 | ಸೆರೆಬ್ರಲ್ ಪಾಲ್ಸಿ | 30 |
| 23 | ಸಿಜ಼ೋಫ್ರೇನಿಯ | 35 |





Scanned with CamScanner

# ಕಲಿಕಾ ನ್ಯೂನತೆಗಳು : Learning Disabilities

**ಪೀಠಿಕೆ:-**

ಕಲಿಕೆ ಜೀವನ ಪರ್ಯಂತ ಎಲ್ಲಾ ಜೀವಿಗಳಲ್ಲೂ ಕಂಡುಬರುವ ಕ್ರೀಯೆ. ಇದೊಂದು ನೈಸರ್ಗಿಕ ಪ್ರಕ್ರಿಯೆಯೂ ಹೌದು. ಇದು ಜೀವಿಯ ವರ್ತನೆಯಲ್ಲಾಗುವ ಶಾಶ್ವತ ಬದಲಾವಣೆಯಾಗಿದ್ದು, ತರಬೇತಿ, ಅಭ್ಯಾಸ, ಮತ್ತು ಅನುಭವದಿಂದ ನಡೆಯುವ ಪ್ರಕ್ರೀಯೆಯೂ ಆಗಿದೆ. ಈ ಹಿನ್ನೆಲೆಯಲ್ಲಿ ಎಲ್ಲಾ ಮಕ್ಕಳ ಪ್ರಾರಂಭಿಕ ಶಿಕ್ಷಣ ತರಗತಿ ಕೋಣೆಯಲ್ಲಿ ಅಭ್ಯಾಸದ ಮೂಲಕ ನಡೆಯುವ ಕಲಿಕೆಯ ಪ್ರಾರಂಭಿಕ ಕಾರ್ಯವೂ ಆಗಿದೆ.ಈ ಕಾರಣದಿಂದ ಎಲ್ಲಾ ಶಾಲೆಗಳಲ್ಲಿ ವಿಭಿನ್ನ ನೆಲೆಗಟ್ಟಿನಲ್ಲಿ ಮಕ್ಕಳ ಕಲಿಕೆಯು ಮಕ್ಕಳ ವೈಯಕ್ತಿಕ ಭಿನ್ನತೆ ಅನುಸಾರ ವಿಭಿನ್ನವಾಗಿರುತ್ತದೆ. ಇದಕ್ಕೆ ಬಹು ಮುಖ್ಯ ಕಾರಣ ಮಕ್ಕಳ ಅನುವಂಶೀಯತೆ ಮತ್ತು ಪರಿಸರಾತ್ಮಕ ಅಂಶಗಳು ಎನ್ನಬಹುದು. ಈ ಕಾರಣದಿಂದ ಮಕ್ಕಳ ಕಲಿಕೆ ಮತ್ತು ಸಾಧನೆ ವ್ಯಕ್ತಿಗತವಾಗಿದ್ದು ಮಕ್ಕಳ ಕಲಿಕಾ ಸಾಮರ್ಥ್ಯವನ್ನು ಅವಲಂಭಿಸಿರುತ್ತದೆ.

ಮಕ್ಕಳ ಉತ್ತಮ ಸಾಧನೆ ಮತ್ತು ಕಳಪೆ ಕಲಿಕೆಗೆ ಅವರ ಆಸಕ್ತಿ, ಸಮಸ್ಯೆಗಳು, ನ್ಯೂನತೆಗಳು,ಸವಾಲುಗಳು ಕಾರಣವಾಗಿರುತ್ತವೆ. ಇಂತಹ ನ್ಯೂನತೆಗೆ ಕೆಲವು ಮಕ್ಕಳ ಅಂಗವಿಕಲತೆ ಮತ್ತು ಅಂಗವೈಫಲ್ಯತೆ ಕಾರಣವಾಗಿದ್ದರೆ.ಇನ್ನೂ ಕೆಲವು ಮಕ್ಕಳಿಗೆ ದೈಹಿಕ ಮತ್ತು ಮಾನಸಿಕ ತೊಂದರೆಗಳು ಕಾರಣವಾಗಿರುತ್ತವೆ. ಅಲ್ಲದೇ ಮಗುವಿನ ಉತ್ತಮ ಕಲಿಕೆಗೆ ಅವರ ಕಲಿಕಾ ಪರಿಸರದ ಅಂಶಗಳು ಕಾರಣವಾಗಿವೆ.

DSM-V or The diagnostic & statistical mannual,5th edition ಪ್ರಕಾರ ನಿರ್ದಿಷ್ಟ ಕಲಿಕಾ ನ್ಯೂನತೆಗಳು ಒಂದು ನ್ಯೂನತೆಯ ಗುಂಪಾಗಿದ್ದು, ಅವುಗಳು ಕಲಿಕೆ ಮತ್ತು ಕೌಶಲಗಳನ್ನು ಅಭಿವೃದ್ಧಿ ಪಡಿಸುವಲ್ಲಿ. ಮತ್ತು ಕೆಲವು ಕೌಶಲಗಳ ಕಲಿಕೆಯಲ್ಲಿ ನೈಜ ವಯಸ್ಸಿನ ಮಕ್ಕಳ ಸಾಮರ್ಥ್ಯಕ್ಕಿಂತ 2 ಅಥವಾ 3 ವರ್ಷ ಕಡಿಮೆ ವಯಸ್ಸಿನ ಮಕ್ಕಳ ಸಾಮರ್ಥ್ಯವನ್ನು ಈ ನ್ಯೂನತೆ ಇರುವ ಮಕ್ಕಳು ಹೊಂದಿರುತ್ತಾರೆ.

**ಸ್ಯಾಮುಯಲ್ ಕರ್ಕ್** ಎಂಬುವರು ಕ್ರೀ.ಶ 1963 ರಲ್ಲಿ ಮೊದಲ ಬಾರಿಗೆ ಕಲಿಕಾ ಸಮಸ್ಯೆಯು ಒಂದು ಕಲಿಕಾ ನ್ಯೂನತೆ ಎಂದು ತಿಳಿಸಿದರು. ಆರಂಭದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಆಲೋಚಿಸುವ. ತರಗತಿಯಲ್ಲಿ ಓದುವ, ಬರೆಯುವ ಮತ್ತು ಗಣಿತ ಕ್ಷೇತ್ರದಲ್ಲಿ ಮಕ್ಕಳ ಅಡೆತಡೆಗಳನ್ನು, ಸಮಸ್ಯೆಯನ್ನು ತೊಂದರೆಗಳನ್ನು ಸೂಕ್ಷ್ಮವಾಗಿ ಗುರುತಿಸಿ ಇಂತಹ ಸಮಸ್ಯೆಗಳನ್ನು ವೈದ್ಯಕೀಯವಾಗಿ ಮತ್ತು ಮನೋವೈಜ್ಞಾನಿಕವಾಗಿ ಸಂಶೋಧನೆಗೆ ಒಳಪಡಿಸಲಾಯಿತು.

sha MS Senior lecturer,
n moto g5 plus
Scanned with CamScanner

ಕಲಿಕಾ ನ್ಯೂನತೆ ಅಥವಾ ಲರ್ನಿಂಗ್ ಡಿಸೇಬಿಲಿಟಿಯಂತಹ ವಿವಿಧ ನ್ಯೂನತೆ ಹೊಂದಿರುವವರು ಪ್ರಪಂಚಾದ್ಯಂತ ಒಂದು ಅಂದಾಜಿನ ಪ್ರಕಾರ ಶೇಕಡಾ 10 ರಷ್ಟು ಇರುವುದು ಅಂಕಿ ಅಂಶಗಳಿಂದ ತಿಳಿದು ಬರುತ್ತದೆ. ಇವರು ಕಲಿಕಾ ಸಮಸ್ಯೆ ಹೊಂದಿರುವ ಮಕ್ಕಳಲ್ಲಿ ಒಂದು ಗುಂಪಾಗಿದ್ದು ಇಂತಹ ಮಕ್ಕಳು ಓದುವುದರಲ್ಲಿ ,ಬರೆಯುವುದರಲ್ಲಿ, ಗಣಿತ ಕಲಿಕೆಯಲ್ಲಿ ಹಿಂದುಳಿದಿದ್ದು, ಅಡೆ ತಡೆ ಮತ್ತು ವಿವಿಧ ರೀತಿಯ ತೊಂದರೆಯನ್ನು ಅನುಭವಿಸುತ್ತಿರುತ್ತಾರೆ. ಇಂತಹವರು ಕಲಿಕಾ ಸವಾಲುಳ್ಳವರಾಗಿದ್ದು ಇವರನ್ನು ಕಲಿಕಾ ನ್ಯೂನತೆ ಹೊಂದಿರುವ ಮಕ್ಕಳು ಎಂದು ಗುರುತಿಸಲಾಗಿದೆ. ಇಂತಹ ಕಲಿಕಾ ನ್ಯೂನತೆಗಳು ಕೆಳಗಿನಂತಿವೆ.

**ಕಲಿಕಾ ನ್ಯೂನತೆಗಳ ವಿಧಗಳು.**

1) ಡಿಸ್ ಲೆಕ್ಸಿಯಾ. Dyslexia ,

2) ಡಿಸ್ ಗ್ರಾಫಿಯಾ. Dysgraphia,

3) ಡಿಸ್ ಕ್ಯಾಲ್ಕುಲಿಯಾ. Dyscalculia,

4) ಎಡಿಹೆಚ್‌ಡಿ. Attention Deficit Hyperactivity Disorder

5) ಸೆರೆಬ್ರಲ್ ಪಾಲ್ಸಿ Cerebral Palsy

6) ಸ್ಕಿಜೋಫ್ರೇನಿಯ .Schizophrenia,

7) ಡಿಸ್‌ಫೋಬಿಯ. Dysphobiya, ¸

8) ಡಿಸ್ ಫೇಸಿಯಾ .Dysphasia/Aphasia,

9) ಡಿಸ್ ಥೈಮಿಯಾ. Dysthymia,

10) ಡಿಸ್ ಫ್ರಾಕ್ಸಿಯಾ., Dyspraxia ,

11) ಎಪಿಡಿ Auditory processing Disorder,

12) ಡಿಸ್ ಮಾರ್ಫಿಯಾ Dysmorphia,

13) ಡೆಲಿರಿಯಮ್ Delirium,

14) ಸೋಲಿಲೋಕ್ Soliloquy,

15) ಡಿಸ್‌ಥೈಮಿಯ Disthymia,

16) ಡಿಸ್ಟೋಫಿಯಾ Dystopia

17) ಆಟಿಸಮ್ Autism



Scanned with CamScanner

18) ಇನ್ಸೋಮ್ನಿಯಾ Insomnia

19) ಸೋಮ್ನಾಮ್ ಬುಲಿಸಮ್ Somnam Bulism

ಕಲಿಕಾ ನ್ಯೂನತೆಯು ವಿಭಿನ್ನವಾಗಿರುವುದರಿಂದ ನಿಖರ ಕಾರಣವನ್ನು ಕಂಡುಹಿಡಿಯುವುದು ಕಷ್ಟ. ಏಕೆಂದರೆ ಒಬ್ಬರ ಕಲಿಕಾ ನ್ಯೂನತೆಗಳು ಅನ್ನೊಬ್ಬರಿಗಿಂತ ವಿಭಿನ್ನವಾಗಿದ್ದು ಕಾರಣಗಳು ಬೇರೆ ಬೇರೆ ಆಗಿರುತ್ತವೆ. ಈ ಹಿನ್ನೆಲೆಯಲ್ಲಿ ನಿಖರವಾದ ಕಾರಣವನ್ನು ಗುರುತಿಸುವುದು ಕಷ್ಟದ ಕೆಲಸ . ಆದರೂ ಮಕ್ಕಳ ಸಮಸ್ಯೆಗಳನ್ನು ಅರಿತು, ಆರಂಭದಲ್ಲಿ ಮನೆಗಳಲ್ಲಿ ಪೋಷಕರು ಮತ್ತು ಶಾಲೆಗಳಲ್ಲಿ ಶಿಕ್ಷಕರು ತಜ್ಞರ ಸಹಾಯವಿಲ್ಲದೆ ಸಾಮಾನ್ಯವಾದ ಕಾರಣಗಳನ್ನು ಗುರುತಿಸಬೇಕು. ಏಕೆಂದರೆ ಮಗು ಪರೀಕ್ಷೆಯಲ್ಲಿ ಕಡಿಮೆ ಅಂಕಗಳನ್ನು ತೆಗೆದಿದೆ ಎಂಬ ಕಾರಣಕ್ಕೆ ಮಗುವಿಗೆ ಕಲಿಕಾ ನ್ಯೂನತೆ ಇದೆ ಎಂದು ತಿಳಿಯಬಾರದು. ಈ ಕಾರಣದಿಂದ ಶಿಕ್ಷಕರು ಮತ್ತು ಪೋಷಕರು, ಪರಿಣಿತರ ಮತ್ತು ಸಂಬಂಧಿಸಿದ ತಜ್ಞರ ಜೊತೆ ಚರ್ಚೆ ನಡೆಸಿ ಇವರ ಸಹಾಯದಿಂದ ಕಾರಣವನ್ನು ಗುರುತಿಸಬಹುದಾಗಿದೆ.

ಈ ರೀತಿಯ ನ್ಯೂನತೆ ಹೊಂದಿರುವ ಮಕ್ಕಳ ಕಣ್ಣು. ಕಿವಿ ಇತ್ಯಾದಿ ಇಂದ್ರೀಯಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಇವರ ವಯಸ್ಸಿನ ಇತರ ಮಕ್ಕಳ ಮಾನಸಿಕ ಬೆಳವಣಿಗೆಯಂತೆ ಇವರು ವಿಕಾಸ ಹೊಂದಿರುತ್ತಾರೆ. ಮತ್ತು ಚಟುವಟಿಕೆಗಳಲ್ಲಿ ಇತರರಂತೆ ಭಾಗವಹಿಸುತ್ತಾರೆ. ತರಗತಿಯಲ್ಲಿ ಇತರ ಮಕ್ಕಳ ರೀತಿಯಲ್ಲಿಯೇ ಗಮನವಹಿಸುತ್ತಾರೆ ಮತ್ತು ಅರ್ಥೈಸಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ತೀವ್ರತರವಾದ ಭಾವನಾತ್ಮಕ ತೊಂದರೆ ಇರುವುದಿಲ್ಲ ಮತ್ತು ಶಾಲೆ. ಮನೆಯಲ್ಲಿ ಇವರ ವರ್ತನೆ ಇತರರಿಗಿಂತ ತುಂಬಾ ಭಿನ್ನತೆ ಇರುವುದಿಲ್ಲ. ಈ ಕಾರಣದಿಂದ ಇವರ ಸಮಸ್ಯೆಗೆ ನಿಖರ ಕಾರಣ ಕಂಡುಹಿಡಿಯುವುದು ಶಿಕ್ಷಕರಿಗೆ ಕಷ್ಟವಾಗಬಹುದು.

**ಕಲಿಕಾ ನ್ಯೂನತೆ ಇರುವ ಮಕ್ಕಳನ್ನು ಗುರುತಿಸುವ ವಿಧಾನ;_**

1) ಮಗುವಿನ ಸಾಂದರ್ಭಿಕ ವರ್ತನೆಯನ್ನು ಸೂಕ್ಷ್ಮವಾಗಿ ವೀಕ್ಷಿಸಿ ದಾಖಲಿಸಿಕೊಳ್ಳಬೇಕು.

2) ಮಗುವಿಗೆ ತಿಳಿಯದಂತೆ ಅನೌಪಚಾರಿಕ ಪ್ರಶ್ನೆಗಳ ಮೂಲಕ ಮಾಹಿತಿ ಸಂಗ್ರಹಿಸಬೇಕು

3) ತರಗತಿಯಲ್ಲಿ ಮಗುವಿನ ಶೈಕ್ಷಣಿಕ ಪ್ರಗತಿ ಆಗಾಗ್ಗೆ ಪರಿಶೀಲಿಸಬೇಕು.

4) ಮಗುವನ್ನು ಗಮನಿಸುವಾಗ ಪೂರ್ವಗ್ರಹ ಪೀಡಿತ ಧೋರಣೆಯನ್ನು ಶಿಕ್ಷಕರು ಹೊಂದಿರಬಾರದು.

5) ಪ್ರತಿ ಹೊಸ ಹೊಸ ಬದಲಾದ ವರ್ತನೆಯ ಬಗ್ಗೆ ತಜ್ಞರೊಂದಿಗೆ ಚರ್ಚೆ ನಡೆಸಬೇಕು

6) ಸಾಧನಾ ಪರೀಕ್ಷೆಗಳನ್ನು ಬಳಸಿ ಮಕ್ಕಳ ನ್ಯೂನತೆ ಕಂಡುಹಿಡಿದುಕೊಳ್ಳಬೇಕು.



Scanned with CamScanner

7) ವಯಸ್ಸಿಗೆ ಅನುಗುಣವಾಗಿ ಓದು, ಬರಹ ಮತ್ತು ಗಣಿತ ಕಲಿಕೆ ಆಗಿದೆಯೇ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

8) ಮನೆ ಮತ್ತು ತರಗತಿಯಲ್ಲಿ ಮಕ್ಕಳ ಅಸಹಜ ವರ್ತನೆಗಳನ್ನು ಸೂಕ್ಷ್ಮವಾಗಿ ಗಮನಿಸಿ ದಾಖಲಿಸಿಕೊಳ್ಳಬೇಕು.

9) ಓದುವಾಗ. ಬರವಣಿಗೆ ಮತ್ತು ಗಣಿತದ ನೋಟ್ ಪುಸ್ತಕಗಳ ದೋಷಗಳನ್ನು ಗುರುತು ಮಾಡಬೇಕು.

10) ತಜ್ಞರ ಮಾರ್ಗದರ್ಶನದೊಂದಿಗೆ ಮಾನಕೀಕೃತ ತಪಶೀಲು ಪರೀಕ್ಷೆ ಬಳಸಿ ವಿಶ್ಲೇಷಣೆ ಮಾಡಬೇಕು.

11) ಕೆಲವು ಮಕ್ಕಳಲ್ಲಿ ಬುದ್ಧಿಶಕ್ತಿ ಮಟ್ಟ ಸ್ವಲ್ಪ ಮಟ್ಟಿಗೆ ಇತರರಿಗಿಂತ ಕಡಿಮೆ ಇರಬಹುದು. ಆದರೆ ಎಲ್ಲಾ ಮಕ್ಕಳಲ್ಲೂ ಈ ಲಕ್ಷಣ ಇರುವುದಿಲ್ಲ.

12) ಇವರಿಗೆ ಒಂದೇ ವಿಷಯದಲ್ಲಿ ಹೆಚ್ಚಾಗಿ ಗಮನ ಕೇಂದ್ರೀಕರಿಸಲು ಆಗುವುದಿಲ್ಲ. ಮತ್ತು ಅಡೆತಡೆ ಗುಣ ಹೊಂದಿರುತ್ತಾರೆ.

13) ಕೆಲವು ಮಕ್ಕಳು ಅತೀ ಚಟುವಟಿಕೆ ಕಾರಣ ಸರಿಯಾಗಿ ಅರ್ಥಮಾಡಿಕೊಳ್ಳುವುದಿಲ್ಲ ಅಥವಾ ಚಂಚಲ ಮನಸ್ಸನ್ನು ಹೊಂದಿರುತ್ತಾರೆ.

ಶಾಲೆಗಳಲ್ಲಿ ಮಕ್ಕಳನ್ನು ಅವರ ತರಗತಿಯ ಮಕ್ಕಳ ವರ್ತನೆ ಮತ್ತು ಶೈಕ್ಷಣಿಕ ಸಾಧನೆಯನ್ನು ಗಮನಿಸಿದಾಗ ಕೆಲವು ಮಕ್ಕಳು ಆಟ, ಗುಂಪು ಚಟುವಟಿಗಳಲ್ಲಿ ಎಲ್ಲರೊಂದಿಗೂ ಹೊಂದಿಕೊಂಡು ಹೆಚ್ಚು ಆಸಕ್ತಿ ಹೊಂದಿರುತ್ತಾರೆ. ಭಾಗವಿಸುವಿಕೆಯಲ್ಲಿ ಎಲ್ಲರಿಗಿಂತ ಮುಂದಿರುತ್ತಾರೆ. ಆದರೆ ಓದಲು ಪ್ರಯತ್ನಿಸಿದರೂ ನಿರಾಸಕ್ತಿ, ಚಂಚಲ ಮನಸ್ಸಿನ ಪರಿಣಾಮ ಓದಿನಲ್ಲಿ ಹಿಂದುಳಿದಿರುತ್ತಾರೆ. ಕೆಲವು ಮಕ್ಕಳು ಭಾಷೆ, ಇತರೆ ವಿಷಗಳ ಕಲಿಕೆಯಲ್ಲಿ ಆಸಕ್ತಿ ತೋರಿಸಿ ಹೆಚ್ಚು ಅಂಕ ಗಳಿಕೆಯ ಮೂಲಕ ಸಾದನೆ ಮಾಡಿದರೆ, ಗಣಿತ ಕಲಿಕೆಯಲ್ಲಿ ಹಿಂದುಳಿದಿರುತ್ತಾರೆ. ಇನ್ನೂ ಕೆಲವು ಮಕ್ಕಳು ಚಟುವಟಿಕೆಗಳಲ್ಲಿ, ಎಲ್ಲರೊಂದಿಗೂ ಹೊಂದಿಕೊಳ್ಳುತ್ತಾರೆ ಹಾಗೂ ಎಲ್ಲಾ ವಿಷಯವನ್ನು ಚೆನ್ನಾಗಿ ಅರ್ಥೈಸಿಕೊಂಡಿರುತ್ತಾರೆ,

ಪರೀಕ್ಷೆಯಲ್ಲಿ ಚೆನ್ನಾಗಿ ಬರೆಯುತ್ತಾರೆ, ಆದರೆ ಅವರ ಬರವಣಿಗೆ ವಕ್ರ, ಒಂದು ಅಕ್ಷರದ ಮೇಲೆ ಅಥವಾ ಜಂಟಿಯಾಗಿ ಇನ್ನೊಂದು ಅಕ್ಷರ ಬರೆಯುವುದು, ಬರವಣಿಗೆ ಕಾಗುಣಿತ ದೋಷ, ತೀರ ನಿಧಾನ ಬರವಣಿಗೆ ಮತ್ತು ಸೋಮಾರಿತನ ವ್ಯಕ್ತಪಡಿಸುತ್ತಾರೆ, ಅಕ್ಷರಗಳು ದುಂಡಾಗಿರುವುದಿಲ್ಲ ಹಾಗೂ ಆರಂಭದಿಂದ ಕೊನೆಯವರೆಗೂ ಒಂದೇ ರೀತಿ ಆಸಕ್ತಿ ಇರುವುದಿಲ್ಲ. ತರಗತಿಯಲ್ಲಿ ಇಂತಹ ಬಿನ್ನತೆಯ ಕಲಿಕಾ ದೋಷ ಹೊಂದಿರುವ ಮಕ್ಕಳು ಒಂದೇ ರೀತಿ ಕಂಡುಬಂದರೂ ನಿರ್ದಿಷ್ಟ ಬೇರೆ



Scanned with CamScanner

ಬೇರೆ ಸಮಸ್ಯೆ ಹೊಂದಿರುತ್ತಾರೆ. ಕಲಿಕೆಯ ಸಂಕೀರ್ಣ ಪ್ರಕ್ರೀಯೆಯಲ್ಲಿ ಹಿಂದುಳಿದ ಮಕ್ಕಳ ಇಂತಹ ನ್ಯೂನತೆಯನ್ನು **ಡಿಸ್‌ಲೆಕ್ಸಿಯ, ಡಿಸ್‌ಕ್ಯಾಲ್ಕುಲಿಯಾ** ಮತ್ತು **ಡಿಸ್‌ಗ್ರಾಫಿಯ** ಎಂಬ ನ್ಯೂನತೆ ಇರುವವರೆಂದು ಗುರುತಿಸಿ, ಸಂಬಂಧಪಟ್ಟವರು ಸಮಸ್ಯೆಯ ಕಾರಣ, ಲಕ್ಷಣ, ಪರಿಣಾಮ ಮತ್ತು ಪರಿಹಾರವನ್ನು ಕಂಡುಕೊಳ್ಳಬಹುದಾಗಿದೆ.

**ಕಲಿಕಾ ನ್ಯೂನತೆಯ ಮಕ್ಕಳ ಸಂಭಾವ್ಯ ಕಾರಣಗಳು ;-**

ಕಲಿಕಾ ನ್ಯೂನತೆ ಒಂದು ಶೈಕ್ಷಣಿಕ ತೊಂದರೆಯಾಗಿದೆ. ಇದು ಮಗುವಿನ ವರ್ತನೆ. ಓದು. ಬರಹ ಮತ್ತು ಲೆಕ್ಕಾಚಾರ ಇತ್ಯಾದಿಗಳ ಮೂಲಕ ಅಭಿವ್ಯಕ್ತವಾಗುತ್ತದೆ. ಇಂತಹ ಅಭಿವ್ಯಕ್ತತೆ ಮಗುವಿನ ಕಲಿಕೆಯನ್ನು ಅವಲಂಭಿಸಿದೆ. ಆದರೆ ಕೆಲವು ಮಕ್ಕಳು ಉತ್ತಮ ಶಾರೀರಿಕ ಆರೋಗ್ಯವನ್ನು ಹೊಂದಿದ್ದರೂ ಸಹಾ ಅವರ ಶೈಕ್ಷಣಿಕ ಸಾಧನೆ ಶೂನ್ಯ ಆಗಿರುತ್ತದೆ, ಇನ್ನೂ ಕೆಲವು ಮಕ್ಕಳು ಬಾಹ್ಯವಾಗಿ ಗುರುತಿಸಲಾಗದ ತೊಂದರೆ ಇಲ್ಲದಿದ್ದರೂ ಅವರ ಕಲಿಕೆ ಉತ್ತಮವಾಗಿರುವುದಿಲ್ಲ. ಈ ರೀತಿಯ ಸಮಸ್ಯೆಯನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಮಕ್ಕಳ ಕಲಿಕಾ ನ್ಯೂನತೆಗಳು ಕಾರಣವಾಗಿರುತ್ತವೆ, ಇಂತಹ ನ್ಯೂನತೆಗಳಿಗೆ ಜನನ ಪೂರ್ವ ಮತ್ತು ಜನನೋತ್ತರ ಅಂಶಗಳು ಕಾರಣವಾಗಿರುತ್ತವೆ.

**1) ಅನುವಶೀಯ ಅಂಶಗಳು ;**

ತಾಯಿಯ ಗರ್ಭಕೋಶದಲ್ಲಿ ಯುಗ್ಮಕೋಶದ ಆರಂಭದಿಂದ ಮಗು ಜನಿಸುವವರೆಗೂ ಅನೇಕ ಅನುವಂಶೀಯ ಮತ್ತು ಪರಿಸರದ ಅಂಶಗಳು ಪ್ರಭಾವ ಬೀರುತ್ತವೆ. ಪ್ರಸವ ಪೂರ್ವದ ಅಂಶಗಳು ಮಗುವಿನ ಕಲಿಕೆಯ ಮೇಲೆ ಪರಿಣಾಮ ಬೀರುತ್ತವೆ. ಈ ಕಾರಣದಿಂದ ಮಗುವಿನ ಕಲಿಕಾ ನ್ಯೂನತೆಗೆ ಈ ಸಂದರ್ಭವೂ ಪ್ರಮುಖ ಪಾತ್ರವಹಿಸುತ್ತದೆ, ಹಾಗಾಗಿ ಶಿಕ್ಷಕರು ಮಗುವಿನ ಕಲಿಕಾ ಸಮಸ್ಯೆಗೆ ಮಗು ಅಥವಾ ಪೋಷಕರು ಯಾರೂ ಕಾರಣವಾಗದೇ ಇದ್ದರೂ ಕಲಿಕೆಯಲ್ಲಿ ಹಿಂದುಳಿಯಲೂ ಅನುವಂಶೀಯ ಕಾರಣ ಎಂಬ ಅಂಶವನ್ನು ಶಿಕ್ಷಕರು ಗಮನಿಸಿ ಸೂಕ್ತ ಪರಿಹಾರ ಕಂಡುಕೊಳ್ಳಬೇಕು.

**1) ಅನುವಂಶೀಯ ಅಂಶಗಳು :**

ಎ) ಜೀನ್ಸ್‌ಗಳು.

ಬಿ) ಕ್ರೋಮೋಸೋಮ್ಸ್‌ಗಳು.

ಸಿ) ನರ ಮಂಡಲ ಮತ್ತು ಮೆದುಳು.

ಡಿ) ವಿಷಯ ಸಂಸ್ಕರಣೆ.

ಇ) ಮಗುವಿನ ಮರೆವು.



Scanned with CamScanner

ಎಫ್) ಅವಧಾನ & ಆಸಕ್ತಿ.

ಜಿ) ಬುದ್ಧಿಶಕ್ತಿ.

ಹೆಚ್) ಹಾರ್ಮೋನ್ಸ್.

ಐ) ಪ್ರಸವ ಪೂರ್ವ ತಾಯಿಯ ಆರೈಕೆ.

ಜೆ) ಪ್ರಸವಪೂರ್ವ ಮಗುವಿನ ಬೆಳವಣಿಗೆ.

ಹೆಚ್) ಅಪಘಾತಗಳು ಮತ್ತು ಆಘಾತಗಳು.

**2) ಪರಿಸರ**

ಜನನಪೂರ್ವ ಮತ್ತು ಜನನೋತ್ತರ ಪರಿಸರವು ಮಗುವಿನ ಕಲಿಕೆಯ ಮೇಲೆ ಪ್ರಭಾವ ಬೀರುವ ಪ್ರಮುಖ ಅಂಶವಾಗಿದೆ. ಮಗು ಅನುವಂಶೀಯವಾಗಿ ಉತ್ತಮ ಲಕ್ಷಣ ಹೊಂದಿದ್ದರೂ, ಉತ್ತಮ ಪರಿಸರ ಇಲ್ಲದಿದ್ದರೆ ಮಗುವಿನ ಕಲಿಕೆ ಸವಾಲಾಗುವ ಸಾಧ್ಯತೆ ಇದೆ. ಈ ಕಾರಣದಿಂದ ಮಗುವಿನ ಪರಿಸರ ಬಹು ಮುಖ್ಯ. ಮಗುವಿನ ಪರಿಸರ ಹೇಗೋ ಶೈಕ್ಷಣಿಕ ಸಾಧನೆ ಹಾಗೆಯೇ ಇರುತ್ತದೆ. ಹಾಗಾಗಿ ಕೆಳಗಿನ ಪರಿಸರದ ಅಂಶಗಳೂ ಮುಖ್ಯ.

ಎ) ಕುಟುಂಬ, ಪೋಷಕರು, ಮನೆ ವಾತಾವರಣ

ಬಿ) ಶಾಲೆ, ಶಿಕ್ಷಕರು, ಕುಟುಂಬದ ಪರಿಸರ

ಸಿ) ಗರ್ಭಾವಸ್ಥೆಯ ತಾಯಿಯ ಆರೋಗ್ಯ, ಮನೋಸ್ಥಿತಿ

ಡಿ) ಔಷಧಿಗಳು. ಆಹಾರ ಸೇವನೆ.

ಇ) ಶೈಶಾವಸ್ಥೆಯ ಮಗುವಿನ ಆರೈಕೆ

ಎಫ್) ಜನನಪೂರ್ವ ತಾಯಿಯ ಆರೈಕೆ

ಜಿ) ಆತಂಕ, ಒತ್ತಡಗಳು, ಅಪಘಾತಗಳು. ಆಘಾತಗಳು.

**ಕಲಿಕಾ ನ್ಯೂನತೆಯ ಇತರೆ ಕಾರಣಗಳು :-**

1) ಅನುವಂಶೀಯತೆ ಮತ್ತು ಪರಿಸರಾತ್ಮಕ ಕಾರಣಗಳು

2) ಪ್ರಸವ ಪೂರ್ವ ಗರ್ಭಾವಸ್ಥೆಯಲ್ಲಿನ ಪರಿಣಾಮಗಳು.

3) ಪ್ರಸವ ವೇಳೆ ಮತ್ತು ಪ್ರಸವ ನಂತರದ ಕಾರಣಗಳು

4) ಇಂದ್ರೀಯಗಳ ಸಮನ್ವಯತೆ ಕೊರತೆ ಮತ್ತು ಅಸಮರ್ಪಕ ಕಾರ್ಯ

5) ಮೆದುಳು ಮತ್ತು ನರಮಂಡಲದ ನಿಷ್ಕ್ರೀಯತೆ ಅಥವಾ ಅವುಗಳ ಕಾರ್ಯಗಳ ಅಡೆ ತಡೆಗಳು

6) ಬಾಲ್ಯದಲ್ಲಿನ ಮಾರಣಾಂತಿಕ ಖಾಯಿಲೆಗಳು.

7) ಅಸಮರ್ಪಕ ಮಾನಸಿಕ ಕಾರ್ಯಗಳು ಮತ್ತು ಅಡೆತಡೆಗಳು



Scanned with CamScanner

8) ಶಾಲೆ ಮತ್ತು ಕುಟುಂಬದ ಪೂರಕ ವಲ್ಲದ ಕಲಿಕಾ ಪರಿಸರ.

9) ಅತೀನಿರೀಕ್ಷೆ, ಹತಾಶೆ. ಸಂಶಯ,ಒತ್ತಡ. ನಕಾರಾತ್ಮಕ ಚಿಂತನೆಗಳು, ಉದ್ವೇಗದಂತಹ ಸಂವೇಗಗಳು.

10) ಸೂಕ್ತವಲ್ಲದ ಬೋಧನಾ ಮತ್ತು ಕಲಿಕಾ ವಿಧಾನಗಳು.

11) ಅವದಾನದ ಕೊರತೆ, ಹೆಚ್ಚಿನ ಮರೆವು. ಕಡಿಮೆ ಅಮೂರ್ತ ಚಿಂತನೆ ಇರುವುದು.

12) ವಿಷಯ ಸಂಸ್ಕರಣೆ ಮತ್ತು ಹಾರ್ಮೋನ್ಸ್‌ಗಳಲ್ಲಿ ವ್ಯತ್ಯಾಸ ಇರುವುದು.

13) ಆಗಾಗ್ಗೆ ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವುದು.

14) ಇಂತಹ ಮಕ್ಕಳು ಸಾಮಾನ್ಯವಾಗಿ ಶಾರೀರಿಕ ವೈಫಲ್ಯ ಹೊಂದಿರುತ್ತಾರೆ.

15) ಬಾಷೆ, ಸಾಮಾಜಿಕ, ಮತ್ತು ಸಂವೇಗಾತ್ಮಕ ತೊಂದರೆಗಳು.

16) ವರ್ತನೆ ಮತ್ತು ಅತೀ ಚಟುವಟಿಕೆ ಸಮಸ್ಯೆಗಳು.

17) ಪ್ರತ್ಯಕ್ಷಾನುಭವ ಮತ್ತು ಸ್ನಾಯು ಚಟುವಟಿಕೆಗಳಲ್ಲಿನ ತೊಂದರೆಗಳು.

**ಕಲಿಕಾ ನ್ಯೂನತೆಯ ಮಕ್ಕಳ ಲಕ್ಷಣಗಳು :-**

1) ಈ ನ್ಯೂನತೆಗಳು ಮಕ್ಕಳಲ್ಲಿ ಅಂತರ್‌ಗತ ಮತ್ತು ಆಂತರಿಕವಾಗಿರುವ ಸಮಸ್ಯೆಯಾಗಿರುತ್ತದೆ.

2) ಈ ನ್ಯೂನತೆ ಬುದ್ಧಿಶಕ್ತಿಯಿಂದ ಪ್ರಭಾವಿತವಾಗಿರುವುದಿಲ್ಲ ಮತ್ತು ಬುದ್ಧಿಶಕ್ತಿ ಮಟ್ಟವನ್ನು ಅವಲಂಭಿಸಿರುವುದಿಲ್ಲ

3) ಇವರು ಸಾಮಾನ್ಯ ಮಕ್ಕಳಂತಿದ್ದು ಓದುವ, ಬರೆಯುವ ಅಥವಾ ಗಣಿತ ಕಲಿಕೆಯಲ್ಲಿ ಇವರ ಸಾಧನೆ ಕಡಮೆ ಇರುತ್ತದೆ.

4) ಈ ನ್ಯೂನತೆಯು ಮಕ್ಕಳ ಕಠಿಣ ಶ್ರಮವನ್ನು ಅವಲಂಭಿಸಿರುವುದಿಲ್ಲ.

5) ಇಂತಹ ನ್ಯೂನತೆಯ ಮಕ್ಕಳು ಸಾಮಾಜಿಕವಾಗಿ ಮತ್ತು ಶೈಕ್ಷಣಿಕವಾಗಿಯೂ ಹಿಂದುಳಿದಿರುತ್ತಾರೆ.

6) ಇಂತಹ ಹೆಚ್ಚಿನ ಮಕ್ಕಳು ಬಹಿರ್‌ಮುಖಿಗಳಾಗಿದ್ದು ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಮುಂದಿರುವ ಸಾಧ್ಯತೆ ಇರುತ್ತದೆ.

7) ತರಗತಿ ಕಲಿಕೆಯಲ್ಲಿ ಪುನರಾವರ್ತಿತ ತಪ್ಪುಗಳನ್ನ ಆಗಾಗ್ಗೆ ಹೆಚ್ಚಾಗಿ ಮಾಡುತ್ತಿರುತ್ತಾರೆ,

8) ಮಕ್ಕಳಲ್ಲಿ ವೈಯಕ್ತಿಕ ಭಿನ್ನತೆ ಅನುಸಾರ ಈ ರೀತಿಯ ಕಲಿಕಾ ನ್ಯೂನತೆಗಳಿರುತ್ತವೆ.

9) ಈ ಮೂರು ರೀತಿಯ ನ್ಯೂನತೆಗಳು ಒಂದೇ ಮಗುವಿನಲ್ಲಿ ಇರುವುದು ವಿರಳ.

10) ಶೈಕ್ಷಣಿಕ ಸಾಧನೆಯಲ್ಲಿ ಹಿಂದಿರುತ್ತಾರೆ, ಆದರೆ ಇತರೆ ಸಹಪಾಠಿ ಚಟುವಟಿಕೆಯಂತಹ ವಿಷಯಗಳಲ್ಲಿ ಮುಂದಿರುತ್ತಾರೆ.



shot on moto g5 plus
Faneesha MS Senior lecturer
Scanned with CamScanner

11) ಇವರಲ್ಲಿ ಹೆಚ್ಚಿನ ಮಕ್ಕಳು ಭಾವನಾತ್ಮಕ ಮತ್ತು ವರ್ತನಾ ಸಮಸ್ಯೆಗಳನ್ನು ಹೊಂದಿರುತ್ತಾರೆ.

12) ಮಕ್ಕಳು ಓದಿನಲ್ಲಿ ಕಡಿಮೆ ಅಂಕ ಗಳಿಕೆ ಅಥವಾ ಕಲಿಕೆಯಲ್ಲಿ ಹಿಂದುಳಿದ ತಕ್ಷಣ ಈ ನ್ಯೂನತೆ ಹೊಂದಿದ್ದಾರೆ ಎಂಬ ನಿರ್ಧಾರಕ್ಕೆ ಬರಬಾರದು.

13) ಈ ನ್ಯೂನತೆ ಹೊಂದಿರುವ ಮಕ್ಕಳು ಇತರ ಮಕ್ಕಳಿಗಿಂತ ವಿಭಿನ್ನ ಋಣಾತ್ಮಕ ವರ್ತನೆ ಹೊಂದಿರುತ್ತಾರೆ.

**ಕಲಿಕಾ ನ್ಯೂನತೆಯ ಮಕ್ಕಳ ಪರಿಹಾರಗಳು ;-**

1) ವಿವಿಧ ಕ್ಷೇತ್ರದ ಅನುಭವಿ ಮತ್ತು ತಜ್ಞರ ಸಹಾಯ ಪಡೆಯಬೇಕು.

2) ಈ ನ್ಯೂನತೆ ಹೊಂದಿರುವ ಮಕ್ಕಳ ವರ್ತನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸಬೇಕು.

3) ಇಂತಹ ಮಕ್ಕಳ ಜೊತೆ ಶಿಕ್ಷಕರು ಮತ್ತು ಪೋಷಕರು ಹೆಚ್ಚು ಹೆಚ್ಚು ಸಂವಹನ ನಡೆಸಬೇಕು.

4) ಈ ನ್ಯೂನತೆ ಹೊಂದಿರುವ ಮಕ್ಕಳ ಜೊತೆ ಯಾವಾಗಲು ಧನಾತ್ಮಕ ಚಿಂತನೆ ಹೊಂದಿರಬೇಕು.

5) ಆಪ್ತ ಸಲಹೆ ಮೂಲಕ ಇವರ ಸಮಸ್ಯೆಗಳನ್ನು ಅರ್ಥೈಹಿಸಿ ಸೂಕ್ತ ಪರಿಹಾರ ಕಂಡುಕೊಳ್ಳಬೇಕು.

6) ಇವರಿಗೆ ಹೆಚ್ಚು ಹೆಚ್ಚು ಅಗತ್ಯ ಪುನರ್‌ಭಲನ ನೀಡುವ ಮೂಲಕ ಆತ್ಮವಿಶ್ವಾಸ ಮೂಡಿಸಬೇಕು.

7) ಇಂತಹ ನ್ಯೂನತೆ ಇರುವ ಮಕ್ಕಳಿಗೆ ಶಾಲಾ ಕಲಿಕೆಯ ನಿಯಮಗಳಲ್ಲಿ ಸಡಿಲಿಕೆ ನೀಡಬೇಕು.

8) ಕಲಿಕೆ ಪ್ರಕ್ರೀಯೆಯ ಪಠ್ಯಕ್ರಮ, ಪರೀಕ್ಷೆ ಮತ್ತು ಮೌಲ್ಯಮಾಪನದಲ್ಲಿ ಹೊಂದಾಣಿಕೆ ಇರಬೇಕು.

9) ಇಂತಹ ನ್ಯೂನತೆ ಬಗ್ಗೆ ಸಾಮಾಜಿಕವಾಗಿ ಜಾಗೃತಿ ಮೂಡಿಸಬೇಕು.

10) ಕೆಲಸಗಳನ್ನು ಹಂಚಿಕೆ ಮಾಡಿನ ಹೆಚ್ಚು ಸಮಯ ನೀಡಿ ಕಲಿಸಬೇಕು.

11) ಈ ನ್ಯೂನತೆಯ ಮಕ್ಕಳನ್ನು ಪ್ರೀತಿ ವಿಶ್ವಾಸದಿಂದ ಕಾಣಬೇಕು.

12) ಶಿಕ್ಷಕರು ಮಗುವಿನ ನ್ಯೂನತೆಯನ್ನು ಸರಿಯಾಗಿ ಮೊದಲು ಗುರುತಿಸಿಕೊಳ್ಳಬೇಕು.

13) ಬೋಧನಾ ವಿಧಾನವನ್ನು ಮಾರ್ಪಡಿಸಿಕೊಂಡು ಪರಿಹಾರ ಬೋಧನೆ ಕೈಗೊಳ್ಳಬೇಕು,

14) ವಿಶೇಷ ತಜ್ಞರ ಸಹಾಯದಿಂದ ಶಾರೀರಿಕ ಮತ್ತು ಮಾನಸಿಕ ತೊಂದರೆ ಪರಿಹರಿಸಿಕೊಳ್ಳಬೇಕು,

15) ಮಕ್ಕಳ ನಿರೀಕ್ಷೆಗೆ ಅನುಗುಣವಾಗಿ ಚಟುವಟಿಕೆ ಮೂಲಕ ಬೋಧಿಸಬೇಕು.

16) ವಿಶೇಶವಾದ ಆಸನ ವ್ಯೆವಸ್ಥೆ ಮತ್ತು ದೃಕ್- ಶ್ರವಣ ಸಾಧನ ಬಳಸಿ ಕಲಿಸಬೇಕು.



Scanned with CamScanner

17) ಮಕ್ಕಳ ವೈಯಕ್ತಿಕ ನ್ಯೂನತೆ ಗಮನಿಸಿ ಸೂಕ್ತ ತಂತ್ರ ದೃಕ್ ಶ್ರವಣ ಸಾಧನೆ ಬಳಸಿ ಬೋಧಿಸಬೇಕು.

18) ವೈಯಕ್ತಿಕ ಗಮನ ನೀಡುವುದು. ಮತ್ತು ವಿಶೇಷ ಶಾಲೆಗಳಲ್ಲಿ ಕಲಿಯಲು ಹೆಚ್ಚು ಅವಕಾಶ ನೀಡಬೇಕು.

19) ಅಕ್ಷರಗಳನ್ನು ಕಲಿಸುವಾಗ ಶಬ್ದವನ್ನು ಮೊದಲು ಗ್ರಹಿಸಿ ಕಲ್ಪನೆಯ ಮೂಲಕ ಕಲಿಸಬೇಕು.

20) ಸಂಕೀರ್ಣ ಪದಗಳನ್ನು ಶುದ್ಧ ಮತ್ತು ಸರಳ ಪದಗಳನ್ನಾಗಿ ವಿಭಾಗಿಸಿ ಬಿಡಿಸಿ ಕಲಿಸಬೇಕು.

21) ಮಕ್ಕಳು ಇಷ್ಟಪಡುವ ಸುಲಭವಾದ ವಿಷಯವನ್ನು ಕಲಿಯಲು ಅವಕಾಶಮಾಡಿಕೊಡುವುದು.

22) ಚಟುವಟಿಕೆ ಮತ್ತು ಸ್ಪರ್ಧೆಗಳ ಮೂಲಕ ಕಲಿಕೆಯ ವೇಗ ಹೆಚ್ಚಿಸಿ ಉತ್ತೇಜಿಸುವುದು.

23) ಬೋಧನಾ ಚಿತ್ರಪಟ.ಮಾದರಿ ಮತ್ತು ಕಲಿಕಾ ಸಾಮಗ್ರಿ ಬಳಸಿ ಬೋಧನೆ ಮಾಡುವುದು.

24) ಕಲಿತ ವಿಷಯವನ್ನು ಬಿಡುವಿನ ವೇಳೆಯಲ್ಲಿ ಪುನರಾವರ್ತನೆ ಮಾಡಿಸುವುದು.

**1) ಡಿಸ್ ಲೆಕ್ಸಿಯ Dyslexia,,**

ಡಿಸ್‌ಲೆಕ್ಸಿಯ ನ್ಯೂನತೆ ಎಂದರೆ ಓದುವುದಲ್ಲಿ ತೊಂದರೆ ಇರುವುದು ಅಥವಾ ಹಿಂದುಳಿದಿರುವುದು. ಇದೊಂದು ಓದುವುದರ ಕಲಿಕಾ ಅಡೆತಡೆ ಅಥವಾ ತೊಂದರೆಯಾಗಿದ್ದು, ಅಕ್ಷರಗಳು . ಪದಗಳ ಜೋಡಣೆ. ಚಿಹ್ನೆಗಳು. ಗ್ರಹಿಕೆ. ವ್ಯಾಕರಣ ನಿಯಮಗಳು ಮತ್ತು ಸರಾಗತೆ ಅಥವಾ ನಿರರ್ಗಳತೆ ಕೊರತೆ ಇತ್ಯಾದಿಗಳಿಗೆ ಸಂಬಂಧಿಸಿದ ನ್ಯೂನತೆಯಾಗಿದೆ.

ಡಿಸ್ಲೆಕ್ಸಿಯಾ ಎಂಬ ಪದವು ಗ್ರೀಕ್ ಭಾಷೆಯ **"ಡಿಸ್ ಮತ್ತು ಲೆಕ್ಸಿಯಾ** ಎಂಬ ಪದಗಳ ಮೂಲವಾಗಿದೆ. **ಡಿಸ್** ಎಂದರೆ **ತೊಂದರೆ** ಅಥವಾ **ಸಮಸ್ಯೆ** ಎಂಬ ಅರ್ಥವನ್ನು ಮತ್ತು **ಲೆಕ್ಸಿಯಾ** ಎಂದರೆ **ಪದ'** ಎಂಬ ಅರ್ಥವನ್ನು ಹೊಂದಿದೆ.

ಈ ರೀತಿಯ ಶೈಕ್ಷಣಿಕ ನ್ಯೂನತೆಯು ಮಕ್ಕಳ ಓದುವುದಕ್ಕೆ ಸಂಬಂಧಿಸಿದೆ. ಇಂತಹ ನ್ಯೂನತೆಯು ಬಹುಪಾಲು ಜೀವನ ಪರ್ಯಂತ ಬರುವ ಲಕ್ಷಣವನ್ನು ಹೊಂದಿರುತ್ತದೆ. ನ್ಯೂನತೆ ಹೊಂದಿರುವ ಮಕ್ಕಳು ನಿಧಾನವಾಗಿ ಓದುವುದು. ಅಕ್ಷರಗಳನ್ನು ಗ್ರಹಿಸದೆ ತಪ್ಪಾಗಿ ಓದುವುದು. ಕಷ್ಟಪಟ್ಟು ಓದುವುದು. ಅರಿವಿಲ್ಲದೆ ಸ್ಪಷ್ಟತೆ ಇಲ್ಲದೆ ಯಾಂತ್ರಿಕವಾಗಿ ತಪ್ಪು ತಪ್ಪು ಓದುತ್ತಾರೆ. ನಿಖರತೆ ಮತ್ತು ಆಸಕ್ತಿ ಕೊರತೆಯಿಂದ. ಪದಗಳ ಕೊನೆಯಲ್ಲಿ ತಪ್ಪಾದ ಉಚ್ಚಾರಣೆ ಮಾಡುವುದರ ಜೊತೆಗೆ ಅಕ್ಷರಗಳನ್ನು ಬಿಟ್ಟು ಚಿಹ್ನೆಗಳನ್ನು ಗಮನಿಸದೆ ಓದುತ್ತಾರೆ.

ಪದಗಳಲ್ಲಿರುವ ಅಕ್ಷರಗಳನ್ನು ಗಮನಿಸದೇ ಕೈಬಿಟ್ಟು ಓದುತ್ತಾರೆ. ಪದ ಮತ್ತು ವಾಕ್ಯವನ್ನು ಅರ್ಥೈಸಿಕೊಳ್ಳುವುದರಲ್ಲಿ ಕಷ್ಟಪಡುತ್ತಾರೆ. ಒಂದು ವಾಕ್ಯವನ್ನು ತಪ್ಪಾಗಿ ಅರ್ಥೈಸಿಕೊಳ್ಳುವುದರಿಂದ ವಾಕ್ಯದಿಂದ ವಾಕ್ಯಕ್ಕೆ ಸಂಬಂಧ ಕಲ್ಪಿಸಿ ಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ ಇವರು



Scanned with CamScanner

ತಪ್ಪಾಗಬಹುದು ಎಂದು ಹೆದರಿ ಜೋರಾಗಿ ಓದಲು ಭಯಪಡುತ್ತಾರೆ. ಸುಖಃ ,ದುಖಿ: ಆಶ್ಚರ್ಯ ಬರುವ ಸಂದರ್ಭದ ಪದಗಳನ್ನು ಉಚ್ಚರಿಸುವಾಗ ಒಂದೇ ಉಚ್ಚಾರಣೆ ಬಳಕೆ ಮಾಡುತ್ತಾರೆ, ಮತ್ತು ಪದಗಳ ಅರ್ಥ ತಿಳಿಯದೆ ಓದುತ್ತಾರೆ.

ಇಂತಹ ನ್ಯೂನತೆ ಇರುವ ಹೆಚ್ಚಿನ ಮಕ್ಕಳಿಗೆ ಕಡಿಮೆ ನೆನಪಿನ ಶಕ್ತಿ ಇರುವ ಸಾಧ್ಯತೆಯಿಂದ ಕಲಿತದ್ದನ್ನೆ ಆಗಾಗ್ಗೆ ಮರೆಯುತ್ತಿರುತ್ತಾರೆ. ಅಲ್ಲದೇ ಇದು ಮಗುವಿನ ಸಂವಹನ ಸಂದರ್ಭದಲ್ಲಿ ಮೌಖಿಕ ಮತ್ತು ಬರವಣಿಗೆಯ ಮೇಲೂ ಪರಿಣಾಮ ಬೀರುತ್ತದೆ. ಮತ್ತು ಇಂತಹ ನ್ಯೂನತೆ ಹೊಂದಿರುವ ಮಕ್ಕಳು ಸಾಮಾನ್ಯವಾಗಿ ಕೆಲವು ಸಂದರ್ಭಗಳಲ್ಲಿ ಪದ ಮತ್ತು ಅಕ್ಷರಗಳನ್ನು ಗುರುತಿಸುವಲ್ಲಿ ಸಮಸ್ಯೆ ಹೊಂದುತ್ತಾರೆ,

ಈ ಸಮಸ್ಯೆಯು ನಿಧಾನ ಮತ್ತು ತಪ್ಪಾಗಿ ಓದುವುದು, ಓದುವಾಗ ತಡವರಿಸುವುದು, ಪದಗಳನ್ನು ಊಹಿಸಿ ಓದುವುದು, ಓದುವಾಗ ನಾಚಿಕೆ ಸ್ವಭಾವ ಹೊಂದಿ ಪುನಾರಾವರ್ತಿತ ಪದಗಳನ್ನು ಊಹಿಸಿ ಓದುವುದು ಅಥವಾ ಓದಲು ಹಿಂಜರಿಯುವುದು ಕಂಡುಬರುತ್ತದೆ.

ಓದುವಾಗ ಪದದ ಅಕ್ಷರಗಳನ್ನು ಗಮನಿಸದೆ ಅಭ್ಯಾಸದ ಪದಗಳೆಂದು ಭಾವಿಸಿ ಪದಗಳ ವ್ಯತ್ಯಾಸ ತಿಳಿಯದೆ ಪುನರಾವರ್ತನೆ ಮಾಡುವುದು. ಪದಗಳನ್ನು ಹೇಳುವಾಗ ಅಂತ್ಯದಲ್ಲಿ ತಪ್ಪು ಮಾಡುವುದು, ಮತ್ತು ಓದುವಾಗ ಶ್ರಮಪಡುವುದು. ಅಕ್ಷರಗಳನ್ನು ಓದುವಾಗ ತಪ್ಪು ಮಾಡುವುದು, ಆಲೋಚಿಸದೆ ಬಾಯಿಗೆ ಬಂದ ಹಾಗೆ ಭಾವಿಸಿ ಅಕ್ಷರ ಓದುವುದು ಹಾಗೂ ಓದುವಾಗ ಪದಗಳನ್ನು ಅರ್ಥೈಹಿಸಿಕೊಳ್ಳುವಲ್ಲಿ ತಪ್ಪುತ್ತಾರೆ ಮತ್ತು ಪದಗಳನ್ನು ನೆನಪಿಟ್ಟುಕೊಳ್ಳುವಲ್ಲಿ ಎಡವುದು ಇತ್ಯಾದಿಗಳ ರೂಪದಲ್ಲಿ ಇವರ ದೋಷಗಳಿರುತ್ತವೆ.

ಈ ನ್ಯೂನತೆಯು ಹೆಚ್ಚಾಗಿ ಮೌಖಿಕವಾಗಿ ಭಾಷೆಯನ್ನು ಓದುವಾಗ, ಸಂವಹನ ನಡೆಸುವಾಗ ಅಥವಾ ಅರ್ಥಮಾಡಿಕೊಳ್ಳುವಾಗ ಕಂಡುಬರುವ ದೋಷದ ಪ್ರಕ್ರಿಯೆಯಾಗಿದೆ. ಈ ಹಿನ್ನೆಲೆಯಲ್ಲಿ ವ್ಯಾಕರಣ, ಚಿಹ್ನೆಗಳ ಗಮನಿಸದಿರುವುದು, ಅಸ್ಪಷ್ಟ ಉಚ್ಚಾರಣೆ, ಅರ್ಥರಹಿತ ಓದು, ಇತ್ಯಾದಿ ಅಂಶಗಳನ್ನು ಒಳಗೊಂಡಿದೆ.

**ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಕಾರಣಗಳು –**

1) ಶಬ್ಧಗಳನ್ನು ಅಥವಾ ಶಬ್ಧಗಳಲ್ಲಿರುವ ಅಕ್ಷರಗಳನ್ನು .ಒತ್ತಕ್ಷರಗಳನ್ನು ಗುರುತಿಸುವಲ್ಲಿ ವಿಫಲವಾಗುವುದು.
2) ಶ್ರವಣ ಪ್ರಕ್ರೀಯೆಯಲ್ಲಿ ತೊಂದರೆ ಇರುವ ಸಾಧ್ಯತೆ ಇದ್ದು ಕೇಳಿಸಿಕೊಳ್ಳುವಾಗ ತಪ್ಪಾಗಿ ಕೇಳಿಸಿಕೊಂಡು ಮನನ ಮಾಡಿಕೊಳ್ಳುವುದು.



Scanned with CamScanner

3) ದೃಷ್ಠಿ ಕಲ್ಪನೆಯಲ್ಲಿ ದೋಷ ಮತ್ತು ಪ್ರತ್ಯಾಕ್ಷಾನುಭದಲ್ಲಿ ತೊಂದರೆ ಇರುವುದರಿಂದ ಅಕ್ಷರಗಳ ಸಂಕೇತಗಳು ಅಸ್ಪಷ್ಟವಾಗಿ ಕಾಣುವುದು.

4) ಕೆಲವು ಅಕ್ಷರಗಳು ಇವರಿಗೆ ತಿರುಗುಮುರುಗು ಪರದೆಯನ್ನು ಅಡ್ಡವಿಟ್ಟಂತೆ ಅಸ್ಪಷ್ಟವಾಗಿ ಕಾಣುವುದು.

5) ಪದಗಳನ್ನು ಅಥವಾ ಅಕ್ಷರಗಳನ್ನು ಸಂಘಟಿತವಾಗಿ ರಚನಾತ್ಮಕವಾಗಿ ಕಲಿಯಲು ಸಾಧ್ಯವಾಗದಿರುವುದು.

6) ಅಕ್ಷರ ಅಥವಾ ಅಂಕಿ ಸಂಖ್ಯೆಗಳ ಸಂಕೇತ ಸ್ಮೃತಿ ಪಟಲದಲ್ಲಿ ಸ್ಪಷ್ಟವಾಗಿ ಮುದ್ರಿತವಾಗದಿರುವುದರಿಂದ ತಕ್ಷಣ ಮರೆಯುವುದು.

7) ಆರಂಭದಲ್ಲಿ ಬಾಷೆ ಬಳಸುವ ಅಕ್ಷರ,ವ್ಯಾಕರಣಾಂಶಗಳನ್ನು ಕಲಿಯುವಾಗ ತಪ್ಪಾಗಿ ಕಲಿತು ತಿದ್ದಿಕೊಳ್ಳದಿರುವುದು ಮತ್ತು ಸರಿಪಡಿಸಿಕೊಂಡು ನೆನಪಿನಲ್ಲಿಟ್ಟುಕೊಳ್ಳದಿರುವುದು.

8) ಮಕ್ಕಳು ಓದುವಾಗ ಪದ ಅಥವಾ ವಾಕ್ಯಗಳಲ್ಲಿರುವ ಅಕ್ಷರಗಳ ವ್ಯತ್ಯಾಸ ಗುರುತಿಸುವಲ್ಲಿ ಸ್ಪಷ್ಟತೆ ಇಲ್ಲದಿರುವುದು.

9) ಈ ನ್ಯೂನತೆ ಹೊಂದಿರುವ ಮಕ್ಕಳು ಮನೆಗಳಲ್ಲಿ ಓದುವಾಗ ಪುನರ್ ಮನನ ಮತ್ತು ಸತತ ಅಭ್ಯಾಸ ಮಾಡದಿರುವುದು.

10) ಕೆಲವು ಮಕ್ಕಳು ಎರಡು ಮೂರು ಭಾಷೆ ಬಳಸುವಾಗ ಒಂದು ಬಾಷೆಯ ಕಲಿಕೆ ಇನ್ನೊಂದಕ್ಕೆ ಅಡ್ಡಿಯಾಗುವುದು.

11) ಕೆಲವು ಮಕ್ಕಳಲ್ಲಿ ಉಚ್ಚಾರಣೆ ದೋಷವಿದ್ದು ಇತರರಿಗೆ ತಿಳಿಯಬಾರದೆಂದು ಅತೀ ವೇಗವಾಗಿ ಓದುವ ದೋಷದ ಸಮಸ್ಯೆ ಇರುವುದು.

12) ಓದುವಾಗ ನಿಲ್ಲಿಸಿ ನಿಲ್ಲಿಸಿ ಓದುವುದು, ಕ್ಲಿಷ್ಠ ಪದಗಳನ್ನು ಬಿಡಿಸಿ ಬಿಡಿಸಿ ಓದುವುದು

ಉದಾ : ಮಹಾಭಿಯೋಗಿಯಾಗಿದ್ದರು. ವಿಧ್ಯಾಭಿಮಾನಿಯಾಗಿದ್ದರು.

**ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಲಕ್ಷಣಗಳು :-**

1) ಇದೊಂದು ಭಾಷಾ ಕಲಿಕೆಗೆ ಸಂಬಂಧಿಸಿದ ನ್ಯೂನತೆ ಆಗಿದ್ದು ಓದುವಾಗ ಕಾಗುಣಿತಗಳ ತಪ್ಪು ಮಾಡುತ್ತಾರೆ.

2) ತಿರುಗು ಮುರುಗು ಹಿಂದಿನದ್ದನ್ನು ಮುಂದೇ ಓದುತ್ತಾರೆ ಮತ್ತು ಮೇಲಿನದ್ದನ್ನು ಕೆಳಗೆ ಕೆಳಗಿನದ್ದನ್ನು ಮೇಲೆ ಬರೆದು ಓದುತ್ತಾರೆ.

ಉದಾ ;- b ನ್ನು d ಎಂದು ಬರೆಯುವುದು ಓದುವುದು, 6 ನ್ನು 9 ಎಂದು ಓದುವುದು.



Scanned with CamScanner

3) ಯಾವುದೇ ಭಾಷೆಯನ್ನು ಬಳಸಿ ಓದುವಾಗ ಏಕಾಗ್ರತೆ ಮತ್ತು ಅದೆ ತದೆ ಮುಂದ ನಿರರ್ಗಳವಾಗಿ ಓದುವುದರಲ್ಲಿ ಕೊರತೆ ಇರುತ್ತದೆ.

4) ಓದುವಾಗ ಪಠ್ಯದಲ್ಲಿರುವ ಅಕ್ಷರ, ಪದಗಳನ್ನು ಗುರುತಿಸುವ, ಜೋಡಿಸುವ ಮತ್ತು ಅರ್ಥೈಸುವಲ್ಲಿ ವಿಫಲರಾಗುತ್ತಾರೆ.

5) ತಿಳಿದಿರುವ ಪದಗಳನ್ನು ಬಳಸಿ ಸಾಲುಗಳ, ಸ್ಪಷ್ಟ ಉಚ್ಚಾರಣೆ ಮೂಲಕ ವಾಕ್ಯ ರಚಿಸಿ ಹೇಳಲು ಮತ್ತು ಬರೆಯಲು ಕಷ್ಟಪಡುತ್ತಾರೆ.

6) ಓದುವಾಗ, ಮಧ್ಯದ ಅಕ್ಷರ, ಕಷ್ಟವಾದ ಪದ, ಒತ್ತಕ್ಷರದ ಪದಗಳು, ಮತ್ತು ವಾಕ್ಯಗಳನ್ನು ಬಿಟ್ಟು ಓದುವ ಪ್ರವೃತ್ತಿ ಹೊಂದಿರುತ್ತಾರೆ.

7) ಕೆಲವು ವೇಳೆ ಬೇರೆ ಬೇರೆ ಅಕ್ಷರಗಳನ್ನು ಅದಲು ಬದಲು ಮಾಡಿಕೊಂಡು ಒಂದೇ ಎಂದು ಭಾವಿಸಿ ಓದುತ್ತಾರೆ.

8) ಪುನರಾವರ್ತಿತ ಅಕ್ಷರಗಳು ಪದಗಳು, ವಾಕ್ಯಗಳು ಮತ್ತು ವಿಷಯವನ್ನು ನೆನಪಿನಲ್ಲಿಟ್ಟು ಕೊಳ್ಳಲು ಅಸಮರ್ಥರಾಗುತ್ತಾರೆ

9) ಒತ್ತಕ್ಷರಗಳು, ದೀರ್ಘಾಕ್ಷರಗಳು ಮತ್ತು ವ್ಯಾಕರಣ ಬದ್ಧವಾಗಿ ಓದುವುದರಲ್ಲಿ ನಿರಂತರ ತಪ್ಪು ಮಾಡುತ್ತಾರೆ.

10) ಭಾಷಾಗ್ರಹಿಕೆ, ಶಬ್ದೋಚ್ಚಾರಣೆ, ಮತ್ತು ಚಿಹ್ನೆಗಳನ್ನು ಗಮನಿಸದೇ ಓದುವಾಗ ಭಾಷಾ ಅಭಿವ್ಯಕ್ತಿಯಲ್ಲಿ ತೊಂದರೆ ಅನುಭವಿಸುತ್ತಿರುತ್ತಾರೆ.

11) ಪದೇ ಪದೇ ಕಲಿತ, ಬಳಕೆ ಮಾಡುವ, ಅರ್ಥೈಸಿಕೊಂಡ ಅಕ್ಷರ, ಸಂಜ್ಞೆಗಳು, ಪದಗಳನ್ನು ಓದುತ್ತಿರುವಾಗ ಮರೆಯುತ್ತಾರೆ.

12) ನಿಧಾನಗತಿ ಓದು, ಓದಲು ಭಯ, ಹಿಂಜರಿಕೆ ಪ್ರವೃತ್ತಿ ಹಾಗೂ ವ್ಯಾಕರಣ ಬದ್ಧವಾಗಿ ಮಾತನಾಡಲು, ಓದಲು ಕಷ್ಟಪಡುತ್ತಾರೆ.

13) ಓದುವಾಗ ಉದ್ದನೆಯ ಒತ್ತಕ್ಷರದ ಪದಗಳಾಗಿದ್ದರೆ ಅವುಗಳನ್ನು ಬಿಡಿಸಿ ನಿರಂತರತೆ ಇಲ್ಲದೇ ಕಡಿಮೆ ಅಥವಾ ಅತೀ ವೇಗದಲ್ಲಿ ತಪ್ಪಾಗಿ ಓದುತ್ತಾರೆ.

**ಡಿಸ್ಲೆಕ್ಸಿಯಾ ಕಲಿಕಾ ನ್ಯೂನತೆಯ ಪರಿಹಾರಗಳು :-**

1) ಮಕ್ಕಳು ಓದುವಾಗ ಸ್ಪಷ್ಟ ಉಚ್ಚಾರಣೆ ಮತ್ತು ವ್ಯಾಕರಣಾಂಶಗಳಿಗೆ ಶಿಕ್ಷಕರು ಮತ್ತು ಪೋಷಕರು ಹೆಚ್ಚು ಒತ್ತು ಕೊಡಬೇಕು.

2) ಆರಂಭದ ಕಲಿಕೆಯಲ್ಲಿ ಬಳಸುವ ಭಾಷೆಯ ಅಕ್ಷರಗಳ ಸ್ಪಷ್ಟ ಪರಿಚಯ ಮಕ್ಕಳಿಂದ ಮಾಡಿಸಬೇಕು.

3) ಮಗುವಿಗೆ ಓದಲು ಶಾರೀರಿಕ ತೊಂದರೆ ಇದ್ದರೆ ಸಂಬಂಧಪಟ್ಟ ತಜ್ಞರಿಗೆ ತೋರಿಸಿ ಮೊದಲು ಪರಿಹಾರ ಕಂಡುಕೊಳ್ಳಬೇಕು.

4) ಪ್ರಾಥಮಿಕ ಹಂತದಲ್ಲಿ ಒತ್ತಕ್ಷರ, ಸ್ವರ ಮತ್ತು ದೀರ್ಘಾಕ್ಷರಗಳನ್ನು ಸ್ಪಷ್ಟವಾಗಿ ಜೋರಾಗಿ ಮೌಖಿಕವಾಗಿ ಹೇಳಿಸಬೇಕು

5) ಮಕ್ಕಳು ಓದುವಾಗ ಕಂಡುಬರುವ ತಪ್ಪುಗಳನ್ನು ಗುರುತಿಸಿ ತಕ್ಷಣ ಆ ತಪ್ಪುಗಳನ್ನು ತಿದ್ದಿ ತಿದ್ದಿ ಹೇಳಿಕೊಡಬೇಕು

6) ಶಿಕ್ಷಕರು ಮತ್ತು ಪೋಷಕರು ಮಾತನಾಡುವಾಗ ಆದಷ್ಟು ಪರ್ಯಾಯ ಮತ್ತು ಹೊಸ ಹೊಸ ಶಬ್ಧಗಳನ್ನು ಬಳಸುವಂತೆ ಪ್ರೋತ್ಸಹಿಸಬೇಕು.

7) ಮಕ್ಕಳೇ ಗುಂಪಾಗಿ ಸ್ವತ: ಓದುವಂತೆ ತಿಳಿಸಿ, ಮಕ್ಕಳ ತಪ್ಪುಗಳನ್ನು ಮಕ್ಕಳೇ ಗುರುತಿಸಲು ತಿಳಿಸಬೇಕು.

8) ಶಾಲೆಗಳಲ್ಲಿ ಶಿಕ್ಷಕರು ನಿತ್ಯ ಪೇಪರ್ ಅಥವಾ ಪಠ್ಯಪುಸ್ತಕವನ್ನು ಮೌಖಿಕವಾಗಿ ಗಟ್ಟಿ ಧ್ವನಿಯಲ್ಲಿ ಓದದ ಮತ್ತು ಮಾತನಾಡುವ ಅಭ್ಯಾಸ ಬೆಳೆಸಬೇಕು.

9) ಪ್ರತಿ ತರಗತಿಯಲ್ಲು ಪ್ರತಿ ದಿನ ಶಿಕ್ಷಕರು ಉಕ್ತಲೇಖನ ಬರವಣಿಗೆ ನೀಡಿ ಅವರು ಮಾಡಿರುವ ತಪ್ಪುಗಳನ್ನು ತಿದ್ದಿ ಓದಲು ತಿಳಿಸಬೇಕು.

10) ಮಕ್ಕಳಿಗೆ ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆಯಲು ಹೆಚ್ಚು ಅವಕಾಶ ನೀಡಿ ಅವರ ದೋಷಗಳನ್ನು ಗುರುತಿಸಿ ಜೋರಾಗಿ ಗಟ್ಟಿ ಧ್ವನಿಯಲ್ಲಿ ಓದಿಸಬೇಕು.

11) ಪ್ರತಿ ದಿನ ಶಾಲೆಗಳಲ್ಲಿ ಮತ್ತು ಮನೆಗಳಲ್ಲಿ ಮಕ್ಕಳಿಗೆ ಮೌಖಿಕವಾಗಿ ಪತ್ರಿಕೆಗಳನ್ನು ಓದುವ ಅಭ್ಯಾಸ ಬೆಳೆಸಬೇಕು.

12) ಕಂಪ್ಯೂಟರ್, ಪ್ರೊಜೆಕ್ಟರ್ ನಂತಹ ದೃಕ್ ಶ್ರವಣ ಮತ್ತು ತಂತ್ರಜ್ಞಾನ ಸಾಧನ ಬಳಸಿ ಮಕ್ಕಳು ಮಾಡುವ ದೋಷಗಳನ್ನು ತಿಳಿಸಿ ಹೇಳಿಕೊಡಬೇಕು.

13) ಶಾಲೆಯಲ್ಲಿ ಎಲ್ಲಾ ಶಿಕ್ಷಕರು ಮಕ್ಕಳ ಜೊತೆ ಪ್ರೀತಿಯಿಂದ ಹೆಚ್ಚು ಹೆಚ್ಚು ಸಂಭಾಷಣೆಯಲ್ಲಿ ತೊಡಗಬೇಕು.

14) ಮಕ್ಕಳಿಗೆ ಹೆಚ್ಚು ಹೆಚ್ಚು ಪ್ರಶ್ನೆಗಳನ್ನು ಕೇಳಲು ಉತ್ತೇಜಿಸಬೇಕು ಮತ್ತು ವಸ್ತುಗಳನ್ನು ಬಳಕೆ ಮಾಡುವ ಮೂಲಕ ಮೂರ್ತಪರಿಕಲ್ಪನೆ ಕಲಿಕೆಗೆ ಪ್ರಚೋದಿಸಬೇಕು.

15) ಮಕ್ಕಳಿಗೆ ಮೊದಲು ಮಾತೃಭಾಷೆಯನ್ನು ಚೆನ್ನಾಗಿ ಮಾತನಾಡಲು ಕಲಿಸಬೇಕು ಮತ್ತು ಮಕ್ಕಳು ಮಾತನಾಡುವಾಗ ಮಾಡುವ ತಪ್ಪುಗಳನ್ನು ತಿದ್ದಿದ ನಂತರವೇ ಮುಂದುವರಿಬೇಕು.



Scanned with CamScanner

16) ಪುನರಾವರ್ತಿತ ತಪ್ಪುಗಳನ್ನು ಗುರುತಿಸಿ ಮಗುವಿಗೆ ಅರ್ಥ ಮಾಡಿಕೊಡಬೇಕು ಮತ್ತು ಓದುವಾಗ ಜೋರಾಗಿ ಓದಿಸುವುದು

17) ಆರಂಭದಲ್ಲಿ ವರ್ಣಚಿತ್ರ ನೋಡಿ ಸನ್ನಿವೇಶವನ್ನು ಹೇಳಿಸಬೇಕು. ಅಕ್ಷರಗಳ ಜೋಡಣೆ, ಅವುಗಳನ್ನು ಬಳಸಿ ಪದ ರಚನೆ, ಅಕ್ಷರ ಬಳಸಿ ಆಟವಾಡಿಸಬೇಕು.

18) ಅರ್ಥೈಹಿಸಿಕೊಂಡು ಓದುವ ಅಭ್ಯಾಸ ಬೆಳಸಬೇಕು, ವ್ಯಾಕರಣ ಚಿಹ್ನೆ ಗಮನಿಸಿ ಓದುವ ಹವ್ಯಾಸ ಬೆಳಸಬೇಕು.

**2) ಡಿಸ್‌ಗ್ರಾಫಿಯಾ.**

ಈ ನ್ಯೂನತೆಯು ಬರವಣಿಗೆಗೆ ಸಂಬಂಧಿಸಿದ ನ್ಯೂನತೆ ಆಗಿದ್ದು .ಬರವಣಿಗೆಯಲ್ಲಿ ಅಸಾಮರ್ಥ್ಯ, ಅಸ್ಪಷ್ಟತೆ, ನಿಧಾನಗತಿ, ಗೊಂದಲದ ಬರವಣಿಗೆ, ಪದಗಳ ನಡುವೆ ಅಂತರ ಇಲ್ಲದಿರುವುದು. ಕಾಗುಣಿತ ಮತ್ತು ವ್ಯಾಕರಣ ದೋಷ ಇತ್ಯಾದಿಗಳ ಸಮಸ್ಯೆ ಹೊಂದಿರುತ್ತಾರೆ. ಅಲ್ಲದೆ ಇಂತಹ ಮಕ್ಕಳು ಬರವಣಿಗೆಯಲ್ಲಿ ಹೆಚ್ಚು ಕಷ್ಟಪಡುತ್ತಾರೆ.









ಕೆಲವು ಸಂದರ್ಭದಲ್ಲಿ ಚಲನೆಯ ಕೌಶಲಗಳು ಪರಿಣಾಮ ಬೀರುವುದಿಲ್ಲ. ಕಠಿಣ ಪದಗಳನ್ನು ಬರೆಯಲು ಅಸಾಮರ್ಥರಾಗಿರುತ್ತಾರೆ, ಸಾಮಾನ್ಯವಾಗಿ ಬರವಣಗೆಯಲ್ಲಿ ಅಕ್ಷರಗಳನ್ನು ತಪ್ಪು ಬರಯುವುದು, ಕಳಪೆ ಕೈಬರಹ ಮತ್ತು ಬರೆಯುವಾಗ ಆಯಾಸ ಹೊಂದಿರುತ್ತಾರೆ. ಕೆಲವು ಸಂದರ್ಭದಲ್ಲಿ ಅಕ್ಷರಗಳು ದುಂಡಾಗಿರುವುದಿಲ್ಲ.

ಬರೆಯುವಾಗ ಅಕ್ಷರಗಳು ಕಲಸು ಮತ್ತು ವಕ್ರವಾಗಿರುತ್ತವೆ. ಗುಂಡು ಮತ್ತು ಚಿಕ್ಕ ಅಕ್ಷರಗಳು ಹೆಚ್ಚಾಗಿರುತ್ತವೆ. ಬರವಣಿಗೆಯಲ್ಲಿ ಸೋಮಾರಿತನ ಮತ್ತು ಕಷ್ಟ ಪಡುವುದು ಇವರ ವರ್ತನೆಯಿಂದ ತಿಳಿಯುತ್ತದೆ. ಆಲೋಚನೆ ಮತ್ತು ಬರವಣಿಗೆಯಲ್ಲಿ ಸಮನ್ವಯತೆ ಕೊರತೆ ಇರುತ್ತದೆ.



Scanned with CamScanner

Scanned with CamScanner

**ಕಾರಣಗಳು :-**

1) ಮೆದುಳು ಮತ್ತು ನರ ಸಂಬಂಧಿತ ಸಂವೇದನೆಗಳ ಪರಿಣಾಮ ವಿಷಯ ಸಂಸ್ಕರಣದ ವ್ಯತ್ಯಾಸ ಇರುವ ಸಾಧ್ಯತೆ ಇರುತ್ತದೆ.

2) ಅಕ್ಷರಗಳು ಅಥವಾ ಪದಗಳ ಬಿಂಬಗಳ ಸ್ಪಷ್ಟವಾಗಿ ಕಾಣದಿರುವ ದೃಷ್ಟಿ ಸ್ಮರಣೆ ನ್ಯೂನತೆಯಾಗಿದೆ.

3) ಬರವಣಿಗೆ ಸಂದರ್ಭದಲ್ಲಿ ಅಕ್ಷರಗಳು. ಒತ್ತಕ್ಷರಗಳು. ಪದಗಳು ನೆನಪಿಗೆ ಬರದಿರುವುದು ಅಥವಾ ಗೊಂದಲ ಇರುವುದು ಅವರ ಒಡನಾಟದಿಂದ ಕಂಡುಬರುತ್ತದೆ.

4) ಸಾಮಾಜಿಕ, ಭಾವನಾತ್ಮಕ ಅಂಶಗಳು ಹಾಗೂ ಬರೆಯುವಾಗ ಏಕಾಗ್ರತೆ ಕೊರತೆ ಮತ್ತು ಅತೀಚಟುವಟಿಕೆಗಳು ಲಕ್ಷಣಗಳು ಕಾಣಿಸುತ್ತವೆ.

5) ಒಂದು ಬಾರಿ ಕಲಿತ ಅಕ್ಷರ ಅಥವಾ ಪದಗಳು ತಕ್ಷಣ ಮರೆಯುಬವುದು, ಚಲನವಲನ ಮತ್ತು ಶ್ರವಣ ದೋಷಗಳು ಕಂಡುಬರುತ್ತವೆ.

**ಲಕ್ಷಣಗಳು :-**

1) ಅಕ್ಷರಗಳನ್ನು ತಿರುಗುಮುರುಗು, ಹಿಂದಿನದ್ದನ್ನು ಮುಂದೆ ಬರೆಯುತ್ತಾರೆ ಮತ್ತು ಮೇಲಿನದ್ದನ್ನು ಕೆಳಗೂ ಮತ್ತು ಕೆಳಗಿನದ್ದನ್ನು ಮೇಲೂ ಬರೆಯುತ್ತಾರೆ.

ಉದಾ :- b ನ್ನು d ಎಂದು ಬರೆಯುವುದು ಓದುವುದು, 6 ನ್ನು 9 ಎಂದು ಬರೆಯುವುದು

2) ಅಕ್ಷರಗಳು ದುಂಡಾಗಿರುವುದಿಲ್ಲ ಮತ್ತು ಬರೆಯುದರಲ್ಲಿ ಹೆಚ್ಚು ಕಷ್ಟಪಡುತ್ತಾರೆ. ಪುಸ್ತಕವಿದ್ದರೂ ವೇಗವಾಗಿ ಅಕ್ಷರಗಳನ್ನು ಬರೆಯುವಾಗ ಹೆಚ್ಚು ಹೆಚ್ಚು ಕಾಗುಣಿತ ದೋಷಗಳನ್ನು ಮಾಡುತ್ತಾರೆ.

3) ಅಕ್ಷರಗಳ ಕಲ್ಪನೆಯಲ್ಲಿ ಸ್ಪಷ್ಟತೆ ಇಲ್ಲದಿರುವುದರಿಂದ ತಪ್ಪಾದ ಪರ್ಯಾಯ ಅಕ್ಷರಗಳನ್ನು ಊಹಿಸಿಕೊಂಡು ಬಳಸುತ್ತಾರೆ

4) ವ್ಯಾಕರಣ ಬದ್ಧವಾಗಿ ಬರೆಯುವುದಿಲ್ಲ ಮತ್ತು ಪುಸ್ತಕ ಅಥವಾ ಸ್ನೇಹಿತರ ಸಹಾಯವಿಲ್ಲದಿದ್ದರೆ ಬರೆಯುವುದು ಕಷ್ಟ

5) ಬರವಣಿಗೆಯ ಆರಂಭದಲ್ಲಿ ಅಕ್ಷರಗಳನ್ನು ಬರೆದಂತೆ ಕೊನೆಯವರೆಗೂ ಅಕ್ಷರಗಳ ಸಾಮ್ಯತೆ ಇರುವುದಿಲ್ಲ.

6) ಕೆಲವು ಸಂದರ್ಭದಲ್ಲಿ ಬೇರೆ ಬೇರೆ ಅಕ್ಷರಗಳನ್ನು ಆಲೋಚಿಸದೇ ಒಂದೇ ಊಹಿಸಿಕೊಂಡು ಬರೆಯುತ್ತಾರೆ



Scanned with CamScanner

7) ತಮ್ಮ ಬಗ್ಗೆನೇ ನಂಬಿಕೆ ಇಲ್ಲದೇ ಪಕ್ಕದಲ್ಲಿರುವವರನ್ನು ನೋಡಿಕೊಂಡು ಬರೆಯುವ ಪ್ರವೃತ್ತಿ ಹೊಂದಿರುತ್ತಾರೆ.


8) ಅಕ್ಷರ ಹಿಂದು ಮುಂದು ಅಥವಾ ಒಂದೇ ಸ್ವರ ಹೊಂದಿದ ಪದಗಳ ಸ್ಪಷ್ಟತೆ ಇಲ್ಲದೆ ತಪ್ಪಾಗಿ ಬಳಸಿ ಬರೆಯುತ್ತಾರೆ.

9) ನಿಗದಿತ ಜಾಗದಲ್ಲಿ ನೇರವಾಗಿ ಬರೆಯಲು ವಿಫಲರಾಗುತ್ತಾರೆ. ಮತ್ತು ಕಲಸು ಬರವಣಿಗೆ ಹೊಂದಿರುತ್ತಾರೆ

**ಪರಿಹಾರಗಳು ;-**

1) ಇಂತಹ ನ್ಯೂನತೆ ಹೊಂದಿದ ಮಕ್ಕಳಿಗೆ ಆರಂಭದಲ್ಲಿ ಭಾಷೆಯಲ್ಲಿ ಬಳಸುವ ಅಕ್ಷರಗಳನ್ನು ಮೊದಲು ಕಲಿಸಬೇತು.
2) ಒತ್ತಕ್ಷರಗಳು. ದೀರ್ಘಾಕ್ಷರಗಳು ಅವುಗಳ ಪರಿಚಯ ಮತ್ತು ಬಳಕೆಯ ಬಗ್ಗೆ ಸ್ಪಷ್ಟತೆ ಇರುವಂತೆ ಕಲಿಸಬೇಕು,
3) ಹೆಚ್ಚು ಹೆಚ್ಚು ಉಕ್ತಲೇಖನ ,ಪುಸ್ತಕವಿಲ್ಲದಂತೆ ಮತ್ತು ಇನ್ನೊಬ್ಬರ ಸಹಾಯವಿಲ್ಲದಂತೆ ಬರೆಯುವುದನ್ನು ಕಲಿಸಬೇಕು.
4) ವ್ಯಾಕರಣಾಂಶಗಳನ್ನು ಚೆನ್ನಾಗಿ ಮನದಟ್ಟು ಮಾಡಿಸಬೇಕು ಮತ್ತು ಅಕ್ಷರಗಳನ್ನು ಬಿಡಿಯಾಗಿ ಬಿಡಿಸಬೇಕು.
5) ಪೋಷಕರು ಅಥವಾ ಶಿಕ್ಷಕರು ಮಕ್ಕಳು ತಪ್ಪು ಬರೆದಾಗ ತಕ್ಷಣ ತಿದ್ದಿ ಸರಿಪಡಿಸಿದ ನಂತರವೇ ಮುಂದಕ್ಕೆ ಹೋಗಬೇಕು,
6) ಮಕ್ಕಳಿಗೆ ತಾವು ಬರೆದ ಬರೆವಣಿಗೆಯಲ್ಲಿರಬಹುದಾದ ತಪ್ಪುಗಳನ್ನು ಅವರೇ ಗುರುತಿಸಲು ತಿಳಿಸಬೇಕು.
7) ಕಪ್ಪು ಹಲಗೆಯ ಮೇಲೆ ಹೆಚ್ಚು ಹೆಚ್ಚು ಬರೆಸಬೇಕು ಮತ್ತು ಬೇರೆಯುವರು ಬರೆದಿರುವುದರಲ್ಲಿ ಕಾಗುಣಿತ ದೋಷಗಳನ್ನು ಗುರುತಿಸಲು ತಿಳಿಸಬೇಕು.

## ಶಿಕ್ಷಕರು ತರಗತಿ ಕೋಣೆಯಲ್ಲಿ ಪ್ರಯತ್ನಿಸಿದ ಒಂದು ಉದಾ :






Scanned with CamScanner

### 3) ಡಿಸ್ಕ್ಯಾಲ್ಕುಲಿಯ

ಈ ನ್ಯೂನತೆಯು ಗಣಿತದ ಕಲಿಕೆಗೆ ಸಂಬಂಧಿಸಿದ ನ್ಯೂನತೆ ಆಗಿದ್ದು, ಮುಖ್ಯವಾಗಿ ಕೂಡುವುದು. ಕಳೆಯುವುದು. ಗುಣಾಕಾರ ಮತ್ತು ಭಾಗಾಕಾರದ ಲೆಕ್ಕಾಚಾರ ಮಾಡುವುದರಲ್ಲಿ ಹಿಂದುಳಿದಿರುತ್ತಾರೆ. ಅಂಕಿ ಸಂಖ್ಯೆಗಳು. ಚಿಹ್ನೆಗಳು. ಮಗ್ಗಿಯ ಕೋಷ್ಟಕಗಳು ಇತ್ಯಾದಿಗಳನ್ನು ಬಳಸುವಾಗ ನೆನಪು ಮಾಡಿಕೊಂಡು ಲೆಕ್ಕ ಬಿಡಿಸುವಲ್ಲಿ ಸಮಸ್ಯೆ ಹೊಂದಿರುತ್ತಾರೆ. ಇಂತಹ ನ್ಯೂನತೆ ಇರುವ ಮಕ್ಕಳು ಗಣಿತದ ಸರಳ ಸಮಸ್ಯೆಗಳನ್ನು ಬಿಡಿಸಲು. ದತ್ತಾಂಶಗಳು. ಸಿದ್ಧಾಂತಗಳು. ಸೂತ್ರಗಳು. ಪ್ರಮೇಯಗಳು ಮತ್ತು ಗಣಿತದ ಮೂಲಭೂತ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುತ್ತಾರೆ. ಮತ್ತು ಸಂಖ್ಯೆಗಳನ್ನು ನೆನಪಿನಲ್ಲಿಟ್ಟುಕೊಳ್ಳಲು. ಅವುಗಳ ಸಂಕೇತ. ಮೌಲ್ಯ ಹಾಗೂ ಅವುಗಳ ಸಂಬಂಧ ಗುರುತಿಸುವಲ್ಲಿ ವಿಫಲರಾಗುತ್ತಾರೆ .



ಬಹುಮುಖ್ಯವಾಗಿ ಅಂಕಿ ಸಂಖ್ಯೆಗಳ ಸ್ಪಷ್ಟ ಕಲ್ಪನೆ ಇಲ್ಲದಿರುವುದರಿಂದ ಅವುಗಳ ಸ್ಥಾನಬೆಲೆಗಳ ಮೂಲಕ ಮೌಲ್ಯಗಳನ್ನು ಗುರುತಿಸುವಲ್ಲಿ ಅಸ್ಪಷ್ಟತೆ ಹೊಂದಿರುತ್ತಾರೆ. ಸಂಭಾವ್ಯ ಮತ್ತು ಬೀಜಗಣಿತದ ಲೆಕ್ಕಗಳನ್ನು ಅರ್ಥೈಸಿಕೊಳ್ಳುವಲ್ಲಿ ವಿಫಲತೆ ಹೊಂದಿದ್ದು. ಸಂಖ್ಯೆಗಳ. ಬೀಜಾಕ್ಷರಗಳು ಮತ್ತು ಬೀಜವಾಕ್ಯಗಳ ಪರಿಕಲ್ಪನೆಗಳ ಬಗ್ಗೆ ಆಲೋಚಿಸುವಲ್ಲಿ ಮತ್ತು ಸಂಬಂಧ ತಿಳಿಯುವಲ್ಲಿ



Scanned with CamScanner

[illegible]

[illegible]

[illegible] :-

[illegible]

[illegible]

1) [illegible]

2) [illegible]

3) [illegible]

4) [illegible]

5) [illegible]



Scanned with CamScanner

6) ಸಂಖ್ಯಾ ಜ್ಞಾನದ ಕೊರತೆ ಮತ್ತು ಕಂಠಪಾಟದ ಮೂಲಕ ಕಲಿಯುತ್ತಾರೆ.

7) ಗಣಿತದ ಭಾಷೆ ,ಮೂಲಭೂತ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳದಿರುವುದು ಕಂಡುಬರುತ್ತದೆ.

8) ಪರಿಣಾಮಕಾರಿಯಲ್ಲದ ಶಿಕ್ಷಕರ ಬೋಧನೆ ಈ ನ್ಯೂನತೆಗೆ ಕಾರಣವಾಗಿರಬಹುದು.

9) ವೈಯಕ್ತಿಕ ಬೋಧನೆಗೆ ಅವಕಾಶವಿಲ್ಲದಿರುವುದು ಒಂದು ಕಾರಣವಾಗಿರುತ್ತದೆ.

10) ಅಮೂರ್ತ ಕಲ್ಪನೆಯ ಸಮಸ್ಯೆ ಅರ್ಥ ಮಾಡಿಕೊಳ್ಳುವಲ್ಲಿ ವಿಫಲತೆ ಹೊಂದಿರುತ್ತಾರೆ.

**ಲಕ್ಷಣಗಳು :-**

ಈ ನ್ಯೂನತೆ ಹೊಂದಿರುವ ಬಹುಪಾಲು ಮಕ್ಕಳು ಇತರೆ ವಿಷಯಗಳ ಕಲಕೆಯಲ್ಲಿ ಮುಂದಿದ್ದು ಗಣಿತ ಕಲಿಕೆಯಲ್ಲಿ ಹಿಂದುಳಿದಿರುವ ಸಾಧ್ಯತೆ ಹೆಚ್ಚು. ಅಲ್ಲದೇ ಪರೀಕ್ಷೆಯಲ್ಲಿ ಕಡಿಮೆ ಅಂಕ ಬಂದಿದೆ ಮತ್ತು ಅಂಗವಿಕಲತೆ ಹೊಂದಿದೆ ಎಂಬ ಕಾರಣಕ್ಕೆ ಡಿಸ್‌ಕ್ಯಾಲ್ಕುಲಿಯಾ ಸಮಸ್ಯೆ ಹೊಂದಿದೆ ಎಂಬ ನಿರ್ಧಾರಕ್ಕೆ ಬರಲು ಸಾಧ್ಯವಿಲ್ಲ.

ಈ ಕಾರಣದಿಂದ ಶಿಕ್ಷಕರು ಮಾನಸಿಕ ಪರೀಕ್ಷೆಯ ಮೂಲಕ ಸಾಮರ್ಥ್ಯ ಗುರುತಿಸುವುದು., ಸೂಕ್ಷ್ಮ ವೈಯಕ್ತಿಕ ಗಮನ ನೀಡುವುದು. ಮಕ್ಕಳನ್ನು ಸೂಕ್ಷ್ಮವಾಗಿ ಅವಲೋಕಿಸುವುದರ ಮೂಲಕ ಮಕ್ಕಳ ವರ್ತನೆ ವೀಕ್ಷಿಸಿವುದು, ತರಗತಿಯಲ್ಲಿ ಗಣಿತ ಕಲಿಕೆಯಲ್ಲಿ ಅವರ ಆಸಕ್ತಿ, ಶೈಕ್ಷಣಿಕ ಪರೀಕ್ಷೆಗಳ ಮೂಲಕ ಕಲಿಕಾ ಸಾಧನೆ ಆದರಿಸಿ ಗುರುತಿಸಬೇಕಾಗುತ್ತದೆ, ಈ ಹಿನ್ನೆಲೆಯಲ್ಲಿ ಈ ಕೆಳಗಿನ ಲಕ್ಷಣಗಳ ಮೂಲಕ ಇಂತಹ ನ್ಯೂನತೆ ಇರುವ ಮಕ್ಕಳನ್ನು ಗುರುತಿಸಬಹುದಾಗಿದೆ,

1) ದೃಷ್ಠಿ ಮತ್ತು ಶ್ರವಣ ದೋಷವನ್ನು ಹೆಚ್ಚಾಗಿ ಹೊಂದಿರುವ ಕಾರಣ ಲೆಕ್ಕಗಳಲ್ಲಿ ಹೆಚ್ಚು ಹೆಚ್ಚು ತಪ್ಪುಗಳನ್ನು ಮಾಡುತ್ತಾರೆ.

2) ನಿರರ್ಗಳತೆ, ಮಾನಸಿಕ ಲೆಕ್ಕಾಚಾರ, ಮತ್ತು ಪರಿಮಾಣಾತ್ಮಕ ತಾರ್ಕಿಕ ಕ್ರೀಯೆ ಇತ್ಯಾದಿಗಳಲ್ಲಿ ಕಡಿಮೆ ಸಾಮರ್ಥ್ಯ ಹೊಂದಿರುತ್ತಾರೆ.

3) ಗಣಿತದ ಮೂಲಭೂತ ಪರಿಕಲ್ಪನೆಗಳಾದ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರಗಳನ್ನು ಅರ್ಥೈಸಿಕೊಳ್ಳಲು ಮತ್ತು ಲೆಕ್ಕಗಳನ್ನು ಮಾಡಲು ಕಷ್ಟಪಡುತ್ತಾರೆ.

4) ಸಂಖ್ಯೆಗಳ ಮೌಲ್ಯಗಳ ಪರಿಕಲ್ಪನೆಯಲ್ಲಿ ಸ್ಪಷ್ಠತೆ ಇಲ್ಲದೇ ಇರುವುದರಿಂದ ಪ್ರತಿ ಸಂದರ್ಭದಲ್ಲೂ ತಪ್ಪು ಲೆಕ್ಕಚಾರ ಮಾಡುತ್ತಾರೆ.

5) ಎಣಿಸುವಾಗ ನಿಖರತೆ ಇರುವುದಿಲ್ಲ. ತಡವರಿಸುತ್ತಾರೆ, ಹೆಚ್ಚು ಸಮಯ ತೆಗೆದುಕೊಳ್ಳುತ್ತಾರೆ ಮತ್ತು ಹೆಚ್ಚಾಗಿ ಬೆರಳುಗಳನ್ನು ಬಳಸುತ್ತಾರೆ.

6) ಗಣಿತದ ಮೂಲಭೂತ ಪರಿಕಲ್ಪನೆ ಅರ್ಥೈಸಿಕೊಳ್ಳುವುದರಲ್ಲಿ ವಿಫಲರಾಗಿ ಲೆಕ್ಕಮಾಡುವ ಸಂದರ್ಭದಲ್ಲಿ ತಪ್ಪಾಗಿ ಲೆಕ್ಕಮಾಡುತ್ತಾರೆ.



Scanned with CamScanner

7) ಗಣಿತದ ಪರಿಭಾಷೆ ಅರ್ಥೈಸಿಕೊಳ್ಳುವುದರಲ್ಲಿ ಅಸಮರ್ಥರಾಗಿರುತ್ತಾರೆ. ಮತ್ತು ಧನ ಮತ್ತು ಋಣ ಚಿಹ್ನೆಗಳ ಬಳಕೆಯಲ್ಲಿ ಗೊಂದಲವಿರುತ್ತದೆ.

8) ಸೂಕ್ತ ಸೂತ್ರ ಆಯ್ಕೆ ಮಾಡುಕೊಳ್ಳುವಲ್ಲಿ ಎಡವುತ್ತಾರೆ. ಮತ್ತು ಹಿಂಜರಿಕೆ, ನಾಚಿಕೆ. ಭಯ ಮತ್ತು ಆತ್ಮವಿಶ್ವಾಸದ ಕೊರತೆ ಇವರಲ್ಲಿರುತ್ತದೆ.

9) ಗಣಿತದ ಪದಗಳು ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಳ್ಳಲು ಕಷ್ಟಪಡುತ್ತಾರೆ. ಮತ್ತು ಅಂದಾಜು. ಊಹೆ. ಮತ್ತು ಅಮೂರ್ತ ಪರಿಕಲ್ಪನೆಗಳನ್ನು ಅರ್ಥೈಸಿಕೊಳ್ಳುವುದಿಲ್ಲ.

10) ಗಣಿತದ ಮೂಲಭೂತ ಪರಿಕಲ್ಪನೆಯಲ್ಲಿ ಸ್ಪಷ್ಟತೆ ಇರುವುದಿಲ್ಲ. ಮತ್ತು ಸಂಕೇತಗಳು. ರೇಖಾಚಿತ್ರಗಳು. ಸೂತ್ರಗಳು.ಚಿಹ್ನೆಗಳ ಬಳಕೆಯಲ್ಲಿ ಹೆಚ್ಚು ದೋಷಗಳಿರುತ್ತವೆ.

**ಪರಿಹಾರಗಳು :–**

ಗಣಿತ ಕಲಿಕೆ ಇತರ ವಿಷಯಗಳಿಗಿಂತ ವಿಭಿನ್ನ. ಮತ್ತು ಎಲ್ಲಾ ಮಕ್ಕಳಿಂದಲೂ ಒಂದೇ ರೀತಿಯ ಕಲಿಕೆಯ ನಿರೀಕ್ಷೆ ಮಾಡಲು ಸಾಧ್ಯವಿಲ್ಲ. ಈ ಹಿನ್ನೆಲೆಯಲ್ಲಿ ಶಿಕ್ಷಕರ ಪರಿಣಾಮಕಾರಿ ಬೋಧನೆಯಲ್ಲೂ ಮಕ್ಕಳ ಕಲಿಕೆಯ ಪ್ರಗತಿ ಎಲ್ಲಾ ಮಕ್ಕಳಲ್ಲೂ ಒಂದೇ ರೀತಿ ಇರುವುದಿಲ್ಲ. ಇದಕ್ಕೆ ಬಹುಮುಖ್ಯ ಕಾರಣ ಮಕ್ಕಳ ವೈಯಕ್ತಿಕ ಕಲಿಕಾ ಸಮಸ್ಯೆಗಳೂ ಕಾರಣವಾಗಬಹುದು, ಈ ಹಿನ್ನೆಲೆಯಲ್ಲಿ ಕೆಲವು ಸಮಸ್ಯೆಗಳನ್ನು ಶಿಕ್ಷಕರೇ ಪರಿಹರಿಸಿಕೊಂಡು ಉತ್ತಮ ಬೋಧನೆ ಮೂಲಕ ಮಕ್ಕಳಲ್ಲಿ ಉತ್ತಮ ಗಣಿತ ಕಲಿಕೆ ಉಂಟುಮಾಡಿದರೆ, ಕೆಲವು ಮಕ್ಕಳಲ್ಲಿ ಇದು ಸಾಧ್ಯವಾಗುವುದಿಲ್ಲ .ಈ ಕಾರಣದಿಂದ ಮಕ್ಕಳ ನ್ಯೂನತೆ ಮತ್ತು ಅವರ ಅಡೆ ತಡೆಗಳನ್ನು ಗುರುತಿಸಿ ವೈಯಕ್ತಿಕ ನಿರೀಕ್ಷೆಯಾನುಸಾರ ಶಿಕ್ಷಕರು ವಿಶೇಷ ಕಾಳಜಿವಹಿಸಿ ಬೋಧನೆ ಮಾಡಬೇಕಾಗುತ್ತದೆ, ಈ ಕಾರ್ಯಕ್ಕೆ ತರಗತಿ ಶಿಕ್ಷಕರು ತಮ್ಮ ಅನುಭವದ ಜೋತೆ ಪೋಷಕರು ಮನ:ಶಾಸ್ತ್ರಜ್ಞರು. ಮತ್ತು ನ್ಯೂರೋತಜ್ಞರ ಸಹಾಯ ಪಡೆದು ಕೆಳಗಿನ ಪರಿಹಾರ ಕ್ರಮಗಳ ಮೂಲಕ ವಿಶೇಷ ಗಮನವಹಿಸಿ ಮಕ್ಕಳ ಅಗತ್ಯತೆ ಮೂಲಕ ಪರಿಹಾರ ಕೈಗೊಳ್ಳಬಹುದಾಗಿದೆ,

1) ಸ್ಥಳ. ಕಾಲ ಮತ್ತು ಪರಿಮಾಣ ಸಂಬಂಧಿತ ಪರಿಕಲ್ಪನೆಯ ಲೆಕ್ಕಗಳನ್ನು ಪ್ರಾಯೋಗಿಕವಾಗಿ ಹೇಳಿಕೊಡಬೇಕು.

2) ಶಿಕ್ಷಕರು ವಿಶೇಷ ವಿನ್ಯಾಸದ ಬೋಧನೆ ಮೂಲಕ ಗಣಿತದ ಪದಗಳು, ಸಂಖ್ಯೆಗಳು ಮತ್ತು ಮೂಲ ಪರಿಕಲ್ಪನೆಗಳನ್ನು ಅರ್ಥಮಾಡಿಸಬೇಕು

3) ಅಂಕಿ ಸಂಖ್ಯೆಗಳು, ಸ್ಥಾನಬೆಲೆ, ಚಿಹ್ನೆಗಳು. ಕೋಷ್ಟಕ ಇತ್ಯಾದಿಗಳ ಓದುವುದು,ಬರೆಯುವುದನ್ನು ಮೊದಲು ಕಲಿಸಬೇಕು.



Scanned with CamScanner

4) ಲೆಕ್ಕದಲ್ಲಿ ಕೊಟ್ಟಿರುವ ದತ್ತಾಂಶ ಮತ್ತು ಕಂಡುಹಿಡಿಯಬೇಕಾದದನ್ನು ಮೊದಲು ಅಭ್ಯಾಸ ಮಾಡಿಸಬೇಕು.

5) ಗಣಿತದ ಸೂತ್ರಗಳು, ಸಿದ್ದಾಂತಗಳು , ಪ್ರಮೇಯಗಳು ಇತ್ಯಾದಿಗಳನ್ನು ಅರ್ಥವಾಗುವಂತೆ ಪರಚಯಿಸಬೇಕು.

6) ಮೂರ್ತ ಪರಿಕಲ್ಪನೆಗಳ ಮೂಲಕ ಕಲಿಯಲು ಗಣಿತ ಸುಲಭ ಎಂಬ ಮನೋಭಾವನೆಯನ್ನು ಮಕ್ಕಳಿಗೆ ಬೆಳೆಸಬೇಕು.

7) ಕ್ಯಾಲ್ಕುಲೇಟರ್. ಕಂಪ್ಯೂಟರ್, ಇತ್ಯಾದಿ ತಂತ್ರಜ್ಞಾನ ಬಳಸಿ ಸರಳ ವಿಧಾನಗಳ ಮೂಲಕ ಗಣಿತದ ಸಮಸ್ಯೆಗಳನ್ನು ಬಿಡಿಸಬೇಕು

8) ಮಕ್ಕಳೇ ಸ್ವಂತ ಲೆಕ್ಕಗಳನ್ನು ಅಭ್ಯಾಸ ಪುಸ್ತಕ ಅಥವಾ ಕಪ್ಪು ಹಲಗೆ ಮೇಲೆ ಬರೆದು ಅಭ್ಯಾಸ ಮಾಡಿಸಬೇಕು.

9) ಮಕ್ಕಳೇ ತಮ್ಮ ತಪ್ಪುಗಳನ್ನು ಗುರುತಿಸಿ. ಕಂಠಪಾಠಮಾಡದಂತೆ, ಚಟುವಟಿಕೆ, ಪ್ರಾಯೋಗಿಕವಾಗಿ ಪರಿಕಲ್ಪನೆ ಕಲಿಯುವಂತೆ ನೋಡಿಕೊಳ್ಳಬೇಕು.

10) ದಿನ ನಿತ್ಯ ಬಳಸುವ ಮೂರ್ತ ಪರಿಕಲ್ಪನೆಯ, ದೈನಂದಿನ ಬಳಕೆಯ ಅನ್ವಯಿಕ ಗಣಿತ ಲೆಕ್ಕಗಳನ್ನು ಮಾಡಿಸಬೇಕು.

11) ಗಣಿತದ ಮೂಲ ಪರಿಕಲ್ಪನೆ. ಸೂತ್ರ, ಪದಗಳು ಇತ್ಯಾದಿಗಳನ್ನು ಪದೆ ಪದೆ ಬಳಸಬೇಕು.

12) ಇತರ ಮಕ್ಕಳಿಗಿಂತ ಪ್ರತಿ ಹಂತದಲ್ಲೂ ಮೌಲ್ಯಮಾಪನ ಮಾಡಿ ತಕ್ಷಣ ತಿದ್ದಿ ಮಕ್ಕಳಿಗೆ ಹೇಳಿಕೊಡಬೇಕು.

13) ಚಟುವಟಿಕೆ ಮತ್ತು ಗಣಿತದ ಆಟಗಳ ಮೂಲಕ .ಪ್ರಾಯೋಗಿಕ ಗಣಿತ ಕಲಿಕೆಗೆ ಹೆಚ್ಚು ಅವಕಾಶ ಮಾಡಿಕೊಡಬೇಕು.



Scanned with CamScanner

## 4) ಎ ಡಿ ಹೆಚ್ ಡಿ. Attention Deficit Hyperactivity Disorder

ಅವಧಾನದ ಕೊರತೆ ಮತ್ತು ಅತೀ ಚಟುವಟಿಕೆ ಒಂದು ರೀತಿಯ ಕಲಿಕಾ ಸಮಸ್ಯೆ ಆಗಿದ್ದು ಕಲಿಕಾ ನ್ಯೂನತೆಯೂ ಆಗಿದೆ. ಅವಧಾನ ಕೇಂದ್ರೀಕರಿಸುವಲ್ಲಿ ವಿಫಲತೆ ಹೊಂದಿರುವ ಸಮಸ್ಯೆಯಾಗಿದೆ. ಪೂರ್ವ ಬಾಲ್ಯವಸ್ಥೆಯಲ್ಲಿ ಅತೀಚಟುವಟಿಕೆಯ ಲಕ್ಷಣವನ್ನು ಹೆಚ್ಚಿನ ಮಕ್ಕಳಲ್ಲಿ ಈ ಚಿಹ್ನೆಯನ್ನು ಕಾಣಬಹುದಾಗಿದೆ. ಇಂತಹ ಮಕ್ಕಳು ಸ್ಪಷ್ಟ ಉದ್ದೇಶ ಮತ್ತು ಗುರಿಗಳನ್ನು ಹೊಂದಿರುವುದಿಲ್ಲ. ಮತ್ತು ಸಂಪೂರ್ಣವಾಗಿ ಯಾವುದೇ ಕೆಲಸವನ್ನು ಮಾಡಲಾರರು. ಮತ್ತು ಯಾವುದೇ ಕೆಲಸವನ್ನು ಯೋಚನೆ ಮಾಡದೇ ಸಮಯ ಸಂದರ್ಭಗಳ ಅರಿವಿಲ್ಲದೇ ಮಾಡುತ್ತಾರೆ.

ಇಂತಹ ನ್ಯೂನತೆ ಹೊಂದಿರುವ ಮಕ್ಕಳು ತೀವ್ರತರವಾದ ಬಿಡುವಿಲ್ಲದ ಸ್ನಾಯು ಚಟುವಟಿಕೆ ಹಾಗೂ ತೀವ್ರ ಬಗೆಯ ಚಲನವಲನದಿಂದ ಕೂಡಿರುತ್ತಾರೆ.ಮತ್ತು ಒಂದು ಕಡೆ ಕುಳಿತ ಜಾಗದಲ್ಲಿ ಕೂರುವುದಿಲ್ಲ. ಸದಾ ಓಡಾಡುವ ಚಲನವಲನ ಪ್ರವೃತ್ತಿ ಹೊಂದಿರುತ್ತಾರೆ.ಇವರು ಆಸಕ್ತಿ ಮತ್ತು ಅವಧಾನದ ಕೊರತೆಯನ್ನು ಹೊಂದಿರುತ್ತಾರೆ. ಚಂಚಲ ಮನೋಸ್ಥಿತಿಯನ್ನು ಹೊಂದಿದ್ದು ಯಾವುದೇ ಕೆಲಸವನ್ನು ಮಾಡುವುದರಲ್ಲಿ ಮಗ್ನರಾಗುವುದಿಲ್ಲ. ಮಾಡುವ ಕೆಲಸವನ್ನು ಪೂರ್ಣಮಾಡುವುದನ್ನು ಬಿಟ್ಟು ಮತ್ತೊಂದು ಕೆಲಸವನ್ನು ಮಾಡುವುದರಲ್ಲಿ ತೊಡಗುತ್ತಾರೆ ಆದರೆ ಆ ಕೆಲಸವನ್ನು ಪೂರ್ಣಗೊಳಿಸುವುದಿಲ್ಲ. ಹೆಚ್ಚು ಸಮಯವನ್ನು ಒಂದೇ ಕಡೆ ಕಳೆಯುವುದಿಲ್ಲ. ಅಲ್ಲದೇ ತಾಳ್ಮೆಯ ಗುಣ ಹೊಂದಿರುವುದಿಲ್ಲ. ಮನಸ್ಸನ್ನು ಕೇಂದ್ರೀಕರಿಸುವ ಗುಣವನ್ನು ಹೆಚ್ಚಾಗಿ ಹೊಂದಿರದೆ. ಅವಧಾನದ ವಿಕೇಂದ್ರೀಕರಣ ಹಾಗೂ ಅವೇಗ ಚಟುವಟಿಕೆಗಳನ್ನು ಒಳಗೊಂಡಿದ್ದು ಕೆಳಗಿನ ಲಕ್ಷಣಗಳನ್ನು ಒಳಗೊಂಡಿದೆ.

**ಲಕ್ಷಣಗಳು :-**

1) ಅತೀಚಟುವಟಿಕೆ
2) ಏಕಾಗ್ರತೆ ಅಥವಾ ಅವಧಾನದ ಕೊರತೆ
3) ನಿಯಂತ್ರಿತ ವರ್ತನೆ
4) ಆವೇಗತೆ ಚಟುವಟಿಕೆ
5) ಅಸಮಾನ್ಯತೀವ್ರ ಚಟುವಟಿಕೆ
6) ನಡೆವಳಿಕೆ ಸಮಸ್ಯೆ
7) ಸಾಮಾಜಿಕ ಅಸಮಾನ್ಯತೆ
8) ಕಲಿಕಾ ಅಡೆತಡೆಗಳು
9) ವಿಕರ್ಷಣೆ
10) ಹತಾಶೆ ಸಹಿಸುವಲ್ಲಿ ವಿಫಲತೆ



Scanned with CamScanner

ಕಾರಣಗಳು :-

1) ಅನುವಂಶೀಯತೆ ಕಾರಣಗಳು

2) ಮಾನಸಿಕ ಕಾರಣಗಳು

3) [illegible]

4) [illegible]

ಪರಿಹಾರಗಳು :-

[illegible]

1) ಔಷಧ ಚಿಕಿತ್ಸೆಗಳು

2) ವರ್ತನಾ ಚಿಕಿತ್ಸೆಗಳು

3) ಜ್ಞಾನಾತ್ಮಕ ವರ್ತನಾ ಚಿಕಿತ್ಸೆಗಳು

4) ಮನೋಚಿಕಿತ್ಸೆಗಳು

[illegible]

ಬೋಧನಾ ವಿಧಾನ ಮಾರ್ಪಡಿಸಿ ಅವರವರ ನ್ಯೂನತೆ ಮತ್ತು ಕಲಿಕೆಯ ವೇಗ ಆದರಿಸಿ ತರಗತಿಯಲ್ಲಿ ಶಿಕ್ಷಕರು ಬೋಧನೆ ಮತ್ತು ಅಗತ್ಯ ಮಾರ್ಗದರ್ಶನ ನೀಡಬೇಕು.

ಮಗುವಿನ ಸಮಸ್ಯೆಗೆ ನಿಜವಾದ ಕಾರಣ ಗುರುತಿಸಿ, ಅರ್ಥೈಸಿಕೊಂಡು ಶಿಕ್ಷಕರು ಸಾಧ್ಯವಿರುವ ಪರಿಹಾರ ಕ್ರಮಗಳನ್ನು ಬಳಸಿಕೊಳ್ಳಬೇಕು. ಇಂತಹ ನ್ಯೂನತೆಗೆ ಮಕ್ಕಳು ಕಾರಣವಲ್ಲ ಎಂಬ ಅಂಶವನ್ನು ಶಿಕ್ಷಕರು ತಿಳಿದುಕೊಳ್ಳಬೇಕು. ಮತ್ತು ಇಂತಹ ಸಮಸ್ಯೆಗಳಿಗೆ ತಂದೆ ತಾಯಿಯ ಬೌದ್ಧಿಕ ಮತ್ತು ಶಾರೀರಿಕ ಲಕ್ಷಣಗಳು ಮಕ್ಕಳಿಗೆ ವರ್ಗಾವಣೆಯಾಗುವ ಸಾಧ್ಯತೆ ಇರುವುದರಿಂದ ಮನೆಯಲ್ಲಿ ಪೋಷಕರು ಮತ್ತು ಶಾಲೆಯಲ್ಲಿ ಶಿಕ್ಷಕರು ಒಂದು ಮಗುವನ್ನು ಮತ್ತೊಂದು ಮಗುವಿಗೆ ಹೋಲಿಕೆ ಮಾಡಬಾರದು. ಮತ್ತು ಇಂತಹ ಮಕ್ಕಳಲ್ಲಿ ಕೀಳರಿಮೆ ಬರದಂತೆ ಮತ್ತು ಕಡೆಗಣಿಸದಂತೆ ಅವರನ್ನು ಪ್ರೀತಿ ವಿಶ್ವಾಸದಿಂದ ನೋಡಿಕೊಳ್ಳಬೇಕು.

**4) ಸೆರೆಬ್ರಲ್ ಪಾಲ್ಸಿ Cerebral Palcy**

ಮಿದುಳುವಾತ ಅಥವಾ ಮಿದುಳಿನ ಪಾರ್ಶ್ವವಾಯು ಒಂದು ಶೈಕ್ಷಣಿಕ ನ್ಯೂನತೆಯಾಗಿದ್ದು .ಕಾಲಾನುಕ್ರಮದಲ್ಲಿ ಉಲ್ಬಣಗೊಳ್ಳಬಹುದಾದ ನರಮಂಡಲದ ತೊಂದರೆಯಾಗಿದೆ. ಇದು ಶರೀರದ ಚಲನೆ ಮತ್ತು ಸ್ನಾಯುಗಳ ಸಂಚಲನೆಯನ್ನು ಬಾಧಿಸುವುದಾಗಿದೆ. ಈ ನ್ಯೂನತೆಯು ಜನನಕ್ಕೆ ಮುಂಚೆ ಪ್ರಸೂತಿ ಸಮಯದಲ್ಲಿ ಅಥವಾ ನಂತರ ಶಿಶುವಿನ ಮಿದುಳಿನ ಕೆಲವು ಭಾಗಗಳಿಗೆ ಹಾನಿ, ಆಘಾತ ಇತ್ಯಾದಿ ಕಾರಣದಿಂದ ಉಂಟಾಗುವಸ್ಥಿತಿಯಾಗಿದೆ.

**ಕಾರಣಗಳು :-**

ಅವುಗಳ ಸಂಭವನೀಯ ಕಾಲಕ್ಕೆ ಅನುಗುಣವಾಗಿ ಮೂರು ಗುಂಪುಗಳನ್ನಾಗಿ ವಿಂಗಡಿಸಬಹುದಾಗಿದೆ.

1) ಪ್ರಸವ ಪೂರ್ವ (ಪ್ರಿನೇಟಲ್)

2) ಜನನದ ಸಮಯ (ಪೆರಿನೇಟಲ್)

3) ಜನನದ ನಂತರ (ಪೋಸ್ಟ್ ನೇಟಲ್)

**1) ಪ್ರಸವ ಪೂರ್ವ :-** ಪ್ರಸವಪೂರ್ವದ ಹಂತದಲ್ಲಿ ಯುಗ್ಮಕೋಶ ಬೆಳವಣಿಗೆ ಹೊಂದಿದ ಸಂದರ್ಭದಿಂದ ಮಗುವಿನ ಜನನದ ಅವಧೀಯಾಗಿದ್ದು ಈ ಅವಧಿಯಲ್ಲಿ ಮಗುವಿನ ಗರ್ಭಾವಸ್ಥೆಯಲ್ಲಿ ತಾಯಿಗೆ ತಗುಲುವ ಸೋಂಕುಗಳು,ಉದಾ. ರುಬೆಲ್ಲಾ. ಹರ್ಪಿಸ್. ಸೈಟೋಮೆಗಲಸ್ ವೈರಸ್. ಆರ್.ಹೆಚ್ ಅಸಮಂಜಸತೆಯಂತವುಗಳು ಉದಾ : – ಎರಿಥ್ರೋಬ್ಲಾಸ್ಟೋಸಿಸ್ ಫಿಟಾಲಿಸ್. ನವಜಾತ ಶಿಶುವಿನ ಹಿಮಾಟಿಕ್ ರಕ್ತಹೀನತೆ .ಕೆನೀಕ್ಟೇರಸ್



Scanned with CamScanner

ಹಾಗೂ ಹೈಪ್ಪಿರೂಬೊನಿಯ) ಹಾಗೂ ಅಕಾಲಿಕತೆ ಚಯಾಪಚಯದ ಕಾರಣಗಳು ಉದಾ ಹೈಪರ್ಗ್ಲೈಸಿಮಿಯ. ಮಗುವಿ ಕಲಿಕಾ ನ್ಯೂನತೆಗೆ ಕಾರಣವಾಗುವ ಸಾಧ್ಯತೆ ಹೆಚ್ಚು.

**2) ಜನನದ ಸಮಯದಲ್ಲಿ :–** ಮಗು ಜನಿಸುವ ಸಮಯದಲ್ಲಿ ಆಗುವ ಜನನದ ಆಘಾತ. ಆಮ್ಲಜನಕದ ಕೊರತೆಯುಂಟಾದಾಗ ಸಮಸ್ಯೆಗಳು ಮುಂದೆ ಮಗುವಿನ ಕಲಿಕೆಯ ಮೇಲೆ ಪ್ರಭಾವ ಭೀರಿ ಬಾಲ್ಯದಲ್ಲೆ ಕಲಿಕೆಯ ನ್ಯೂನತೆ ಆಗುವ ಸಾಧ್ಯತೆ ಇರುತ್ತದೆ.

**3) ಜನನದ ನಂತರ :** ಮಗು ಜನಿಸಿದ ನಂತರ ಕಾರಣಾಂತರಗಳಿಂದ ಮಗುವಿನ ತಲೆಗೆ ಪೆಟ್ಟಾಗಿ ಗಾಯವಾಗುವುದು.ಆಕಸ್ಮಿಕವಾಗಿ ಮಿದುಳಿಗೆ ಸೋಂಕು ತಗುಲುವುದು ಮತ್ತು ಮಿದುಳಿನ ರಕ್ತಹೀನತೆ ಕೊರತೆಯಿಂದ ಈ ಸಮಸ್ಯೆ ಉಂಟಾಗುವ ಸಾಧ್ಯತೆ ಇರುತ್ತದೆ.

**ಕಾರಣಗಳು :**

ಸೆರೆಬ್ರಲ್ ಪಾಲ್ಸಿ ಇರುವ ಎಲ್ಲಾ ಮಕ್ಕಳ ದೈಹಿಕ ನ್ಯೂನತೆಗಳು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರುತ್ತವೆ. ಕೆಲವು ಮಕ್ಕಳು ಸ್ವತಂತ್ರವಾಗಿ ನಡೆಯಬಹುದು ಆದರೆ ಕೆಲವು ಮಕ್ಕಳು ದೈನಂದಿನ ಕೆಲಸ ಕಾರ್ಯಗಳಿಗೂ ಸಹ ಇತರರನ್ನು ಅವಲಂಭಿಸಿರುತ್ತಾರೆ. ಅಥವಾ ಅಂಗವಿಕಲರಿಗೆ ಉಪಯೋಗಿಸುವಂತಹ ಗಾಲಿ ಕುರ್ಚಿ ಹಾಗೂ ಇತರೆ ಸಾಧನಗಳ ಮೂಲಕ ತಮ್ಮ ದೈನಂದಿನ ಚಟುವಟಿಕೆಗಳನ್ನು ನಿರ್ವಹಿಸಬಹುದು,ಹಾಗೆಯೇ ಕೆಲವು ಮಕ್ಕಳು ಫೈನ್ ಮೋಟಾರ್ ಸ್ಕಿಲ್ ಗಳಾಗ ಬರವಣಿಗೆ,ಬಟ್ಟೆಯ ಗುಂಡಿ ಹಾಕಿಕೊಳ್ಳುವುದು. ಸೂಕ್ಷ್ಮವಾದ ವಸ್ತುಗಳನ್ನು ಹಿಡಿದುಕೊಳ್ಳುವುದು ಮುಂತಾದ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಸಮರ್ಥರಾಗಬಹುದು ಕೆಲವರು ಅಸಮರ್ಥರಾಗಬಹುದು.

ಸೆರೆಬ್ರಲ್ ಪಾಲ್ಸಿ ಹೊಂದಿರುವ ಹಲವಾರು ಮಕ್ಕಳು ಸಾಮಾನ್ಯ ಬುದ್ಧಿವಂತಿಕೆ ಅಥವಾ ಅತಿಹೆಚ್ಚು ಬುದ್ಧಿವಂತಿಕೆ ಹೊಂದಿರುವವರನ್ನು ಕಾಣಬಹುದು.ಈ ನ್ಯೂನತೆ ಹೊಂದಿರುವ ಮಕ್ಕಳ ಶೈಕ್ಷಣಿಕ ಸಾಮರ್ಥ್ಯ ಇತರ ಮಕ್ಕಳಂತೆ ಇರಬಹುದು. ಆದರೇ ಕೆಲವು ಮಕ್ಕಳು ಬರವಣಿಗೆ ಅಥವಾ ಅಕ್ಷರಗಳನ್ನು ಓದುವಲ್ಲಿ ಅಸಮರ್ಥವಾಗಿರಬಹುದು, ಹಾಗೆಯೇ ಕೆಲವು ಮಕ್ಕಳಿಗೆ ತಮಗೆ ತಿಳಿದಿರುವ ಜ್ಞಾನವನ್ನು ವ್ಯಕ್ತಪಡಿಸಲು ಸಹ ಮಾತಿನ ತೊಂದರೆಯಿಂದ ಕಷ್ಟವಾಗಬಹುದು.

ಮೇಲಿನ ಎಲ್ಲಾ ಅಂಶಗಳಿಂದ ಸೆರೆಬ್ರಲ್ ಪಾಲ್ಸಿ ಹೊಂದಿರುವ ಮಕ್ಕಳು ಒಬ್ಬರಿಗಿಂತ ಇನ್ನೊಬ್ಬರು ಭಿನ್ನವಾಗಿರುತ್ತಾರೆ. ಈ ಭಿನ್ನತೆಯನ್ನು ಗುರುತಿಸಿ ಸಂಬಂಧಿಸಿದವರು ಸೂಕ್ಷ್ಮವಾಗಿ ಮಕ್ಕಳ ಜೊತೆ ಪ್ರೀತಿಯಿಂದ ಕಾರ್ಯನಿರ್ವಹಿಸಬೇಕು. ಹಿಗಾಗಿ ಶಿಕ್ಷಕರಿಗೆ ಮತ್ತು ಇತರೆ ಸಿಬ್ಬಂಧಿಗಳಿಗೆ ಇವರ ಸಮಸ್ಯೆ ಪರಿಹರಿಸುವುದು ಒಂದು ಸವಾಲಿನ ಕಾರ್ಯವೇ ಎಂದು ಹೇಳಬಹುದು.



Scanned with CamScanner

ಸೆರಬ್ರಲ್ ಪಾಲ್ಸಿ ಹೊಂದಿರುವ ಮಕ್ಕಳ ಕೂಲಂಕುಷವಾದ ಪರೀಕ್ಷೆ ಮತ್ತು ಮಾಪನ ಕಷ್ಟಕರವಾಗುವ ಕೆಲಸ. ಕಾರಣವೇನೆಂದರೆ ಈ ಸಮಸ್ಯೆ ಹೊಂದಿರುವ ಮಕ್ಕಳಿಗೆ ಕೇವಲ ದೈಹಿಕ ನ್ಯೂನತೆಗಳಲ್ಲದೇ. ಕಲಿಕೆಯ ಇತರ ವಿಕಾಸ ಕ್ಷೇತ್ರಗಳಾದ ಮಾತು, ಬಾಷೆ. ಸಾಮಾನ್ಯ ಜ್ಞಾನ ಮತ್ತು ದೈನಂದಿನ ಕಾರ್ಯಚಟುವಟಿಕೆಗಳು ಇತ್ಯಾದಿ ಕ್ಷೇತ್ರಗಳಲ್ಲಿ ಮಾಪನ ಮಾಡುವುದು ಕಷ್ಟಕರವಾದ ಕೆಲಸವಾಗಿರುತ್ತದೆ.

ಸೆರೆಬ್ರಲ್ ಪಾಲ್ಸಿ ಮಕ್ಕಳ ಕೂಲಂಕುಷವಾದ ಪರೀಕ್ಷೆ ಮಾಪನ ಮಾಡುವುದು ಕಷ್ಟವಾದರೂ ಸಹ ವೈಯಕ್ತಿಕ ಸೆರೆಬ್ರಲ್ ಪಾಲ್ಸಿ ಹೊಂದಿರುವ ಮಕ್ಕಳ ಮಾಪನ ಮಾಡುವುದರಿಂದ ಮಗುವಿನ ಸಾಮರ್ಥ್ಯಗಳೇನು, ನ್ಯೂನತೆಗಳೇನು ಎಂದು ತಿಳಿದು ಅವರನ್ನು ಅನುಕೂಲಕರ ಶಾಲೆಗಳಿಗೆ ಸೇರಿಸಲು ಅನುಕೂಲವಾಗುತ್ತದೆ.ಇಂತಹ ಮಕ್ಕಳನ್ನು ಅವರ ನ್ಯೂನತೆ ಅನುಸಾರ ಮಗುವಿಗೆ ಸಾಮಾನ್ಯ ಶಾಲೆಯಲ್ಲಿ ಸೇರಿಸಬಹುದು ಅಥವಾ ವಿಶೇಷ ಶಾಲೆಗಳಲ್ಲಿ ಶಿಕ್ಷಣ ಕೊಡಿಸಬಹುದು. ಹಾಗೆಯೇ ಮಗುವಿಗೆ ಯಾವ ಸಾಧನ ಸಲಕರಣೆಗಳನ್ನು ನೀಡಿ ಮಗುವಿಗೆ ಕಲಿಕೆ ಉಂಟುಮಾಡಬಹುದು ಅಥವಾ ಜೀವನ ಮಟ್ಟವನ್ನು ಉತ್ತಮಪಡಿಸಬಹುದು ಎಂದು ತಿಳಿದುಕೊಳ್ಳಲು ನೆರವಾಗುತ್ತದೆ.

**ಸೆರೆಬ್ರಲ್ ಪಾಲ್ಸಿಯ ಲಕ್ಷಣಗಳು :-**

1) ದೇಹದ ಹಾನಿಗೊಳಗಾಗಿರುವ ಭಾಗವು ಸೆಳೆತ ಮತ್ತು ಜಿಗಿತವನ್ನು ಹೊಂದಿರುವುದರಿಂದ ಸಾಮಾನ್ಯ ಮಕ್ಕಳಂತೆ ಇವರ ಒಡನಾಟ ಇರುವುದಿಲ್ಲ.

2) ಹಾನಿಗೊಳಗಾಗಿರುವ ಭಾಗದ ಚಲನೆಯನ್ನು ನಡೆಸಲು ಮಾಡಿದಾಗ ಚಲನೆಯು ಸಾಧ್ಯವಾಗುವುದಿಲ್ಲ

3) ಸಾಮಾನ್ಯವಾಗಿ ದೇಹದ ತೋಳುಗಳಲ್ಲಿ ಹಾಗೂ ಬೆನ್ನಿನ ಭಾಗದಲ್ಲಿ ಮತ್ತು ಕಾಲುಗಳಲ್ಲಿ ಸೆಳೆತವು ಹೆಚ್ಚಾಗಿ ಕಂಡುಬರುತ್ತದೆ.

4) ಸ್ನಾಯುಗಳ ಸೆಳೆತದಿಂದ ಗಾಭರಿ ಭಯ ಹೆಚ್ಚಾಗುತ್ತದೆ ಹಾಗಾಗಿ ಹೆಚ್ಚಾಗಿ ಶಾರೀರಿಕ ನೋವನ್ನು ಅನುಭವಿಸುತ್ತಿರುತ್ತಾರೆ.


5) ಮಿದುಳಿನ ಪಾರ್ಶ್ವವಾಯು ,ಸ್ಪಾಸ್ಟಿಕ್ ಡೈಪ್ಲೆಜಿಯಾ ಅಥವಾ ಪಾರಾಪ್ಲೆಜಿಯ ಇರುವ ಮಗುವಿನ ನಡುಗೆಯಲ್ಲಿ ದೋಷ ಹೊಂದಿರುತ್ತಾರೆ

6) ತೋಳೆರಡು ಒಳಗೆ ತಿರುಗಿಕೊಂಡು ಮಂಡಿಗಳ ಬಳಿ ಮಡುಚಿಕೊಂಡು ಪಾದಗಳು ಮೆಂಟಿಗಾಲಿನ ಸ್ಥಿತಿಯಲ್ಲಿ ಇರುತ್ತದೆ.




Scanned with CamScanner

ಚಿತ್ರ :- ಮಿದುಳ ಪಾರ್ಶ್ವವಾಯು ಸ್ಪಾಸ್ಟಿಕ್ ಕ್ವಾಡ್ರುಪ್ಲೆಜಿಯ ಹಾಗೂ ಎಕ್ಸ್ಟೆನ್ಸಾರ್ ಥ್ರಸ್ಟ್‌ನ ಪ್ರಾತಿನಿಧಿಸುವಿಕೆ ನಿಲವು.



ಚಿತ್ರ :- ಸ್ಪಾಸ್ಟಿಸಿಟಿ ಹಾಗೂ ಅಥಟೋಸಿಟ್ ಬೆರೆತ ಎಲ್ಲಾ ನಾಲ್ಕು ಅವಯವಗಳನ್ನು ತೀವ್ರ ರೀತಿಯಲ್ಲಿ ಒಳಗೊಂಡ ಮಿದುಳ ಪಾರ್ಶ್ವವಾಯು ಇರುವ ಮಗುವಿನ ಪ್ರಾತಿನಿಧಿಕ ನಿಲುವು.






Scanned with CamScanner

shot on moto g5s plus
Faneesha MS Senior lecturer,

ಚಿತ್ರ :- ಎಡಕ್ಕೆಯ ಮಾನವರು ಮುಂದಿನ ಪಾರ್ಶ್ವವಾಯುವಿರುವ ಮಗುವಿನ ಪ್ರಾತಿನಿಧಿಕ ಚಿತ್ರ ಕಾಲಿನ ಬೆರಳನ್ನು, ಹಿಮ್ಮಡಿ ಕಾಲನ್ನು, ಮಂಡಿಯಲ್ಲಿ ನಡೆಯಬೇಕಾದ ಅಗತ್ಯವನ್ನು ಮತ್ತು ಹಾಕಿನ್ಸ್ ರಿಂದ ಮರು ಬರೆಯಲಾಗಿದೆ. ಆರ್ ಹಾಕಿನ್ಸ್ ನ ಹಾಗೂ ಹಾಕಿನ್ಸ್ ಓ ಸ್ನಾಯುವಿನ ಹಾಗೂ ನರಯುಕ್ತ ಫಿಲಡೆಲ್ಫಿಯಾ ಲಿಪ್ಪಿನ್ಕಾಟ್ 1968 ಅನುಮತಿಯೊಂದಿಗೆ.



**ಸ್ಪಾಸ್ಟಿಕ್ :-**

ಇದರಲ್ಲಿ ಅವಯವದ ಸ್ನಾಯುವು ಬಿಗಿಯಾಗಿದ್ದು ಹಠಾತ್ತನೆ ಸಂಕುಚಿತಗೊಳ್ಳುತ್ತದೆ. (ಚಲನೆ ಹಾಗೂ ಎಳೆತದ ಮಿತ್ಯದಲ್ಲಿ) ಹೆಚ್ಚಿನ ಸ್ನಾಯು ಹುರಿಯ (ಟೋನಸ್) ಆಳದ ಆವರ್ತನ/ಪ್ರತಿವರ್ತನಗಳನ್ನು ಗಮನಿಸಲಾಗುತ್ತದೆ.ಮಗುವಿನ ಬೆಳವಣಿಗೆಯಲ್ಲಿ ಸಾಕಷ್ಟು ಸ್ನಾಯುಗಳು ಕಿರಿದಾಗುತ್ತಾ ಹೋಗಿ ವಿಕೃತಿಗಳಲ್ಲಿ ಪರಿಣಮಿಸುವುದು.

**ಅಥೆಟಾಯಿಡ್ :-**

ಅವಯವಗಳಿಗೆ ಅರ್ಥಹೀನ ಅನೈಚ್ಛಿಕ ಚಲನೆಗಳು ಬರುತ್ತವೆ.

**ಅಟಾಕ್ಸಿಕ್ :-**

ಅಟಾಕ್ಸಿಯಾ ಸಮತೋಲನದ ಕೊರತೆ ಸುತ್ತಲಿನ ಜಗತ್ತಿನ ಸ್ಥಿತಿಗತಿಗಳಿಗೆ ಹೊಂದಿಕೊಳ್ಳುವಲ್ಲಿ ಕೊರತೆ ಹಾಗೂ ಅಸಂಯೋಜಿತ ಚಲನೆಯು ಬರುತ್ತದೆ. ಅವಯವದ ನಡುಕ ಅಥವಾ ಅಲ್ಲಾಡುವಿಕೆಯನ್ನು ನೋಡಬಹುದು.



Scanned with CamScanner

**ಸಂಬಂಧಿತ ಲಕ್ಷಣಗಳು :-**

1) ಮೌಖಿಕ : ದಂತ್ಯ ನುಂಗಲು ಕಷ್ಟಜೊಲ್ಲು ಸುರಿಸುವಿಕೆ. ಹಲ್ಲುಕಡಿಯುವಿಕೆ, ದಂತಕುಳಿಗಳು

2) ಮಾತಿನ ತೊಂದರೆಗಳು

3) ಶ್ರವಣ ನ್ಯೂನತೆ

4) ಸೆಳೆತದ ತೊಂದರೆ

5) ಬುದ್ಧಿಮಾಂದ್ಯತೆ

**ನಿರ್ವಹಣೆ:-**

ನರಗಳಿಗೆ ಸಂಬಂಧಪಟ್ಟ ಕೊರತೆಯ ಸ್ವರೂಪ ಹಾಗೂ ತೀವ್ರತೆ ಹಾಗೂ ಸಂಬಂಧಪಟ್ಟ ತೊಂದರೆಗಳ ನಿರ್ವಹಣೆಯತ್ತ ಯೋಜನೆಗಳು ನಿರ್ಧೇಶಿತವಾಗಿವೆ. ರೋಗ ಲಕ್ಷಣದ ಚಿಕಿತ್ಸೆಯನ್ನು, ಸೆಟೆತಗಳು ನಡವಳಿಕೆಯ ತೊಂದರೆಗಳಿಗಾಗಿ ಟ್ರಾಂಕ್ವಲೈಜರ್ಸ್, ದೈಹಿಕ ವ್ಯಾಯಾಮ ಚಿಕಿತ್ಸೆ, ಶೈಕ್ಷಣಿಕ ಹಾಗೂ ಸಾಮಾಜಿಕ ನೆರವು ಹಾಗೂ ವೃತ್ತಿಪರ ತರಬೇತಿಯ ಮಾರ್ಗದರ್ಶನವು ಅತ್ಯಗತ್ಯ

**ಸೆರೆಬ್ರಲ್ ಪಾಲ್ಸಿಯ ನ್ಯೂನತೆಯ ಪರಿಹಾರಗಳು :**

1) ಅತಿಯಾದ ಮುದ್ದು ಅತಿಯಾದ ಹೊಗಳಿಕೆ ಮಕ್ಕಳ ಆರೋಗ್ಯಕರ ಬೆಳವಣಿಗೆಗೆ ಮಾರಕ

2) ಮಗುವಿನ ಸಾಧನೆಗಳಿಗೆ ಪ್ರಶಂಶೆ ಪ್ರೋತ್ಸಾಹಗಳಿಗೆ ಸಿಗಬೇಕು

3) ಪ್ರೀತಿ ವಿಶ್ವಾಸಗಳಿಂದ ಮಾರ್ಗದರ್ಶನ ಮಾಡಬೇಕು

4) ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡುವಂತೆ ಮಾರ್ಗದರ್ಶನ ಮಾಡಬೇಕು

5) ಸದಾ ಮಗುವಿನ ತಪ್ಪುಗಳನ್ನು ಎತ್ತಿ ಟೀಕೆ ಮಾಡುವುದು ಅವಾಕ್ಯ ಶಬ್ದಗಳು, ದೈಹಿಕ ಹಿಂಸೆ ಇವು ಮಗುವಿನಲ್ಲಿ ಕೀಳಿರಿಮೆ ಉಂಟುಮಾಡುತ್ತದೆ.ದ್ವೇಷ ಭಾವನೆಯನ್ನು ಬೆಳೆಸಬಹುದು.

## 6) ಸಿಜೋಫ್ರೇನಿಯ, Schizophrenia,

ಸಿಜೋಫ್ರೇನಿಯಾ ಎಂಬ ಪದವು ಸಿಜೋ ಮತ್ತು ಫ್ರೀನಿಯಾ ಎಂಬ ಪದಗಳಿಂದ ಬಂದಿದೆ. 'ಸಿಜೋ' ಎಂದರೆ ಸ್ಪ್ಲಿಟ್ ಮತ್ತು ಫ್ರೀನಿಯ ಎಂದರೆ ಮೈಂಡ್ ಎಂಬ ಅರ್ಥವನ್ನು ಒಳಗೊಂಡಿದೆ. ಹಾಗಾಗಿ ಸಿಜೋಫ್ರೇಮಿಯಾ ಎಂದರೆ "ಸ್ಪ್ಲಿಟ್ ಆಫ್ ದಿ ಮೈಂಡ್" ಎಂಬ ಅರ್ಥವನ್ನು ಒಳಗೊಂಡಿದೆ. ಇದು ಒಂದು ಮನೋನ್ಯೂನತೆ ಅಥವಾ ಸಿಂಡ್ರೋಮ್ ಆಗಿದ್ದು ಛಿದ್ರ ಮನಸ್ಸು, ಮನೋವ್ಯಾಧಿ. ಕವಲುಮನ. ಒಡಕುಮನ. ದ್ವಂದ್ವ ವ್ಯಕ್ತಿತ್ವ ಇತ್ಯಾದಿ ಅರ್ಥಗಳನ್ನು ಒಳಗೊಂಡಿದೆ.

ಇಂತಹ ನ್ಯೂನತೆ ಹೊಂದಿರುವ ಸಾಮಾನ್ಯ ತರಗತಿಯಲ್ಲಿಯೇ ಇರುತ್ತಾರೆ ಹಾಗೂ ನೋಡಲು ಸಾಮಾನ್ಯ ಮಕ್ಕಳಂತೆಯೇ ಇರುತ್ತಾರೆ

ಈ ನ್ಯೂನತೆ ಇರುವವರು ಹೆಚ್ಚಾಗಿ ಭಯ, ಅಪನಂಬಿಕೆ, ಹೊಂದಿದ್ದು ಓದು ಬರಹದ ಕಡೆ ಹೆಚ್ಚು ಗಮನ ನೀಡುವುದಿಲ್ಲ. ಬೇರೆಯವರು ಕೊಲೆಮಾಡಬಹುದು, ನನ್ನನ್ನು ತೇಜೋವದೆ ಮಾಡುತ್ತಿರಬಹುದು ಎಂಬ ಭ್ರಮೆಯನ್ನು ಹೊಂದಿರುತ್ತಾರೆ. ಈ ಕಾರಣದಿಂದ ಹೆಚ್ಚಾಗಿ ಇವರು ಇನ್ನೊಬ್ಬರ ಬಗ್ಗೆ ಸಂಶಯ ಅಥವಾ ಅಪನಂಬಿಕೆಯನ್ನು ಹೊಂದಿರುತ್ತಾರೆ. ಇಂತಹ ನ್ಯೂನತೆ ಹೊಂದಿರುವವರು ಸಹಜ ಮನೋಸ್ಥಿತಿ ಹೊಂದಿದ್ದಾರೆ ಎಂದು ಕಂಡುಬಂದರೂ ಇವರನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸಿಜೋಫ್ರೀನಿಯ ಮನೋ ನ್ಯೂನತೆ ಹೊಂದಿದವರಾಗಿರುತ್ತದೆ.

ಹಾಗಾಗಿ ಈ ನ್ಯೂನತೆ ಹೊಂದಿರುವವರು ಸಾಮಾನ್ಯ ಮಕ್ಕಳಂತೆ ಇದ್ದರೂ ಇವರ ನಡವಳಿಕೆಗಳು ಸಾಮಾನ್ಯ ಮಕ್ಕಳಿಗಿಂತ ಭಿನ್ನವಾಗಿರುತ್ತವೆ. ಈ ಕಾರಣದಿಂದ ಶಾಲೆಯಲ್ಲಿ ಶಿಕ್ಷಕರು ಮತ್ತು ಮನೆಗಳಲ್ಲಿ ಪೋಷಕರು ಇಂತಹ ವರ್ತನೆಗಳನ್ನು ಗುರುತಿಸಿ ಅಗತ್ಯ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕು. ಅಗತ್ಯವಾದರೆ ತಜ್ಞರಿಗೆ ತೋರಿಸಿ ಚಿಕಿತ್ಸೆ ನೀಡಿದಲ್ಲಿ ಮಾತ್ರ ಸಮಸ್ಯೆಗೆ ಪರಿಹಾರ ಕೊಂಡುಕೊಳ್ಳಬಹುದು ಮತ್ತು ಇತರ ಮಕ್ಕಳಂತೆ ಉತ್ತಮ ಕಲಿಕೆಯನ್ನು ಉಂಟುಮಾಡಬಹುದು.

**ಸಿಜೋಫ್ರೇನಿಯ ನ್ಯೂನತೆಯ ಲಕ್ಷಣಗಳು :-**

1) ಇತರರು ಮಾತನಾಡುತ್ತಿದ್ದರೆ ಅವರು ನಮ್ಮ ಬಗ್ಗೆಯೇ ಮಾತನಾಡಿಕೊಳ್ಳುತ್ತಿದ್ದಾರೆ ಎಂಬ ಅಪನಂಬಿಕೆಯ ಜೊತೆ ಭ್ರಮೆಯು ಹೆಚ್ಚಾಗಿ ಇರುತ್ತದೆ.

2) ಈ ನ್ಯೂನತೆ ಹೊಂದಿರುವ ಮಕ್ಕಳ ಮಾತು, ಅವರ ನೋಟ ಮತ್ತು ಆಲೋಚನೆಗಳು ಇತರ ಮಕ್ಕಳಿಗಿಂತ ವಿಭಿನ್ನವಾಗಿರುತ್ತವೆ.

3) ಸಾಮಾನ್ಯವಾಗಿ ಇವರಿಗೆ ಯಾರೋ ಹತ್ತಿರಕ್ಕೆ ಬಂದು ಕಿವಿಯಲ್ಲಿ ಮಾತನಾಡಿದಂತೆ ಬಾಸವಾಗುತ್ತದೆ ಹಾಗೂ ಒಬ್ಬೊಬ್ಬರೆ ಮಾತನಾಡಿಕೊಳ್ಳುವ ಗುಣ ಹೊಂದಿರುತ್ತಾರೆ.

4) ಬಾವೋದ್ವೇಗತೆ ಸಾಮಾನ್ಯರಂತೆ ಇರುವುದಿಲ್ಲ ಈ ಕಾರಣದಿಂದ ಸುಮ್ಮನೆ ಅಳುವುದು. ಅರ್ಥರಹಿತ ಮಾತು ಮತ್ತು ಅವರ ಆಲೋಚನೆಗಳು ನೈಜತೆಗಿಂತ ಭಿನ್ನವಾಗಿರುತ್ತವೆ.

5) ಆತ್ಮೀಯರಾಗಿರುವವರು ಸಹಾಯಕ್ಕೆ ಬಂದವರೂ ತಮಗೆ ತೊಂದರೆ ಉಂಟುಮಾಡುತ್ತಾರೆ ಎಂಬ ಮನೋಭಾವನೆಯವನ್ನು ಹೊಂದಿರುತ್ತಾರೆ

6) ಯಾವ ವ್ಯಕ್ತಿಯ ಬಗ್ಗೆಯು ಸರಿಯಾದ ನಂಬಿಕೆ ಹೊಂದದೆ ಅನುಮಾನ. ಅಪನಂಬಿಕೆ ಗುಣವನ್ನು ಹೆಚ್ಚಾಗಿ ಹೊಂದಿರುತ್ತಾರೆ



Scanned with CamScanner

7) ತರಗತಿಯಲ್ಲಿ ಬಹು ಬೇಗ ಅನಾವಶ್ಯಕ ಕೋಪ, ಒತ್ತಡ ಮಾಡಿಕೊಳ್ಳುವುದು, ಸಂಕುಚಿತ ಆಲೋಚನೆ, ಆಕ್ರಮಣಕಾರಿ ಮನೋಸ್ಥಿತಿ ಇತ್ಯಾದಿ ಲಕ್ಷಣಗಳನ್ನು ಹೊಂದಿರುತ್ತಾರೆ.

8) ಒಬ್ಬಂಟಿಯಾಗಿ ಇರುವ ಮತ್ತು ಇತರರ ಜೊತೆ ಯಾವುದನ್ನು ಹೇಳಿಕೊಳ್ಳದ ಗುಣವನ್ನು ಹೊಂದಿರುತ್ತಾರೆ.

9) ಇತರ ಮಕ್ಕಳ ಜೊತೆ ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸದೇ ಪ್ರತ್ಯೇಕವಾಗಿರುವ ಗುಣವನ್ನು ಹೆಚ್ಚಾಗಿ ಬೆಳೆಸಿ ಕೊಂಡಿರುತ್ತಾರೆ.

10) ಏಕಾಗ್ರತೆ ಕೊರತೆ, ಹೆಚ್ಚಿನ ಮರೆವು, ಅರ್ಥರಹಿತ ಮಾತುಗಾರಿಕೆ ಮತ್ತು ಅಸ್ಪಷ್ಟವಾದ ಆಲೋಚನೆಯನ್ನು ಹೊಂದಿರುತ್ತಾರೆ.

11) ಪ್ರತಿ ದಿನ ಓದು, ಬರಹ, ಲೆಕ್ಕಾಚಾರದಂತಹ ಶೈಕ್ಷಣಿಕ ಚಟುವಟಿಕೆಗಳಲ್ಲಿ ಸದಾ ಒತ್ತಡವನ್ನು ಹೊಂದಿರುತ್ತಾರೆ.

12) ಈ ನ್ಯೂನತೆ ಹೊಂದಿದ ಮಕ್ಕಳ ಮನಸ್ಸು ದ್ವಂದ್ವದ ಕಾರಣ ಚಂಚಲವಾಗಿರುತ್ತದೆ. ಇವರಿಗೆ ಸ್ಪಷ್ಟತೆ ಇಲ್ಲದಿರುವುದರಿಂದ ನೈಜತೆಯ ಅರಿವು ಬರುವುದಿಲ್ಲ.

**ಚಟೋತ್ಪ್ರೇರಿಯ ನ್ಯೂನತೆಯ ಕಾರಣಗಳು :-**

1) ಅನುವಂಶೀಯ ಕಾರಣಗಳು ಮತ್ತು ಪರಿಸರದ ಕಾರಣಗಳು

2) ಪ್ರಸವಪೂರ್ವ ಸಮಯದ ತಾಯಿಯ, ಕೆಟ್ಟ ಹವ್ಯಾಸ ಅಪಘಾತ, ಆಘಾತಗಳು ಮತ್ತು ಇತರೆ ಅವಘಡಗಳಿಂದ.

3) ಪೋಷಕರ ದೋಷಯುಕ್ತ ಕ್ರೋಮೋಸೋಮ್ ಅಥವಾ ಜೀನ್‌ಗಳು ಮಕ್ಕಳಿಗೆ ವರ್ಗಾವಣೆಯಿಂದ.

4) ಆರಂಭದಲ್ಲಿ ಈ ನ್ಯೂನತೆಯನ್ನು ಶಿಕ್ಷಕರು ಅಥವಾ ಪೋಷಕರು ಗುರುತಿಸಿ ತಕ್ಷಣ ಚಿಕಿತ್ಸೆ ನೀಡದಿರುವುದು.

5) ಕೆಲವು ಮನೆಗಳಲ್ಲಿ ಮಕ್ಕಳಿಗೆ ಅತಿಯಾದ ಶಿಸ್ತು, ಮತ್ತು ಶಾಲೆಯ ಅತೀ ಒತ್ತಡದ ಸಂದರ್ಭಗಳು.

6) ಗರ್ಭಾವಸ್ಥೆಯಲ್ಲಿ ತಾಯಿಯ ಅತಿಯಾದ ಧೂಮಪಾನ, ಮದ್ಯಪಾನ, ಡ್ರಗ್ಸ್ ಸೇವನೆಯಂತಹ ದುಶ್ಚಟಗಳು ಇತ್ಯಾದಿ ಸೇವನೆಯಿಂದ

7) ಕೆಲವು ಶಾಲೆ ಅಥವಾ ಮನೆಯಲ್ಲಿ ಅತಿಯಾದ ಭಾವೋದ್ರೇಕತೆ, ಒತ್ತಡ , ಅತಿಯಾದ ಶಿಸ್ತು ಇತ್ಯಾದಿಗಳಿಂದ.



Scanned with CamScanner

8) ಕೆಲವು ಸಂದರ್ಭದಲ್ಲಿ ಈ ನ್ಯೂನತೆಯ ಮಕ್ಕಳ ಲಕ್ಷಣ ಪೂರ್ವಜರಿಂದ ವಂಶವಾಹಿ ವರ್ಗಾವಣೆಯಾಗುವುದು.

**ಸಿಜೋಫ್ರೇನಿಯ ನ್ಯೂನತೆಯ ಪರಿಹಾರಗಳು :-**

1) ಪ್ರಾಥಮಿಕ ಹಂತದ ಆರಂಭದಲ್ಲಿ ಈ ನ್ಯೂನತೆಯನ್ನು ಗುರುತಿಸಿ ತಕ್ಷಣ ಪರಿಹಾರ ನೀಡುವುದು.

2) ಈ ನ್ಯೂನತೆ ಹೊಂದಿದ ಮಕ್ಕಳು ಮತ್ತು ಪೋಷಕರಿಗೆ ಆಪ್ತಸಲಹೆ ಮೂಲಕ ಪರಿಹಾರ ಕಂಡುಕೊಳ್ಳುವುದು.

3) ಅಗತ್ಯವಾದಲ್ಲಿ ತಜ್ಞರ ಸಲಹೆ ಪಡೆದು ಶಾಲೆಯಲ್ಲಿ ಶಿಕ್ಷಕರು ಮತ್ತು ಮನೆಗಳಲ್ಲಿ ಪೋಷಕರು ಸೂಕ್ತ ಪರಿಸರ ಒದಗಿಸುವುದು.

4) ಮನೋವೈಜ್ಞಾನಿಕ ತೆರಪಿಗಳ ಮೂಲಕ ಚಿಕಿತ್ಸೆ ನೀಡುವುದು ಮತ್ತು ಹೆಚ್ಚಾಗಿ ಇತರ ಮಕ್ಕಳ ಜೊತೆ ಬೆರೆಯುವಂತೆ ನೋಡಿಕೊಳ್ಳುವುದು.

5) ಇವರಿಗೆ ಇಷ್ಟವಾದ ಚಟುವಟಿಕೆ, ಕ್ರೀಡೆ ಅಥವಾ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಹೆಚ್ಚಾಗಿ ಬೆರೆಯುವಂತೆ ನೋಡಿಕೊಳ್ಳುವುದು.

6) ಇಂತಹ ನ್ಯೂನತೆ ಹೊಂದಿರುವ ಮಕ್ಕಳನ್ನು ಗುರುತಿಸಿ ವೈಯಕ್ತಿಕ ಗಮನ ನೀಡಿ, ಪ್ರೀತಿ ವಿಶ್ವಾಸದಿಂದ ಇವರನ್ನು ಕಾಣುವುದು .

**ಕಲಿಕಾ ನ್ಯೂನತೆ ಇರುವ ಮಕ್ಕಳಿಗಿರುವ ಸೌಲಭ್ಯಗಳು;-**


1) ಸರ್ಕಾರಿ ಅಥವಾ ಅನುದಾನ ಪಡೆಯುತ್ತಿರುವ ಯಾವುದೇ ಶಾಲೆಗಳಲ್ಲಿ ಪ್ರವೇಶಕ್ಕೆ ಅವಕಾಶ.


2) ಪ್ರಮಾಣ ಪತ್ರ ಪಡೆದಿದ್ದರೆ ಮುಖ್ಯ ಪರೀಕ್ಷೆಯಲ್ಲಿ ಕೆಲವು ವಿಷಯಗಳಲ್ಲಿ ವಿಯಾಯಿತಿ.

3) ಸಮಸ್ಯೆ ತೀವ್ರವಾಗಿದ್ದರೆ ಮುಕ್ತ ಶಾಲೆಗಳ್ಲಿ ಕಲಿಯಲು ಅವಕಾಶ.



Scanned with CamScanner




Scanned with CamScanner